

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 280 Sunday 20-07-2025 E-mail : maruti.b.hosamani76@gmail.com Page: 4 Price : Rs. 1/-


## ದ್ವಿತೀಯ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ





**ಸಿಹಿ ಕಹಿ ಸುದ್ದಿ,**
**ವಿಜಯನಗರ:** ವಿಜಯನಗರ ಜಿಲ್ಲೆ ಮಾದಿಗ ಮಹಾಸಭಾ ವತಿಯಿಂದ 2 ನೇ. ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಗರದ ಎಸಿ ಬುದ್ಧ ಫಂಕ್ಷನ್ ಹಾಲ್ ನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಎಚ್.ಎನ್.ಎಫ್ ಇಮಾಮ್ ನಿಯಾಜಿ ಅಧ್ಯಕ್ಷರು ನಗರ ಅಭಿವೃದ್ಧಿ ಪ್ರಾಧಿಕಾರ ಹೊಸಪೇಟೆ ಇವರು ಸಂವಿಧಾನ ಶಿಲ್ಪಿ ಡಾ, ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಡಾ, ಬಾಬು ಜಗಜೀವನ್ ರಾಮ್ ಅವರ ಭಾವ ಚಿತ್ರ-ಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ನೆರೆದಂತ ಎಲ್ಲಾ ಗಣ್ಯರು ದೀಪವನ್ನು ಪ್ರಜ್ವಲಿಸುವುದರ ಮೂಲಕ ಹಾಗೂ ನೂತನ ಪದಾಧಿಕಾರಿಗಳು ಪ್ರಮಾಣ ವಚನ ಸ್ವೀಕಾರದೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪ್ರಾಸ್ತಾವಿಕವಾಗಿ ಎ.ಬಸವರಾಜ್ ಮಾತನಾಡಿ ನಮ್ಮ ಸಂಘವು ಸಮಾಜದ ಏಳಿಗೆಗಾಗಿ ಮತ್ತು ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸುತ್ತಿದೆ ಒಂದು ಸಂಘವನ್ನು ಮುನ್ನಡೆಸಬೇಕಾದರೆ ಅನೇಕ ರೀತಿಯ ಸಮಸ್ಯೆಗಳು ಬರುತ್ತವೆ ಅದನ್ನು ಬದಿಗೊಟ್ಟಿ ನಾವೇ ಮುಂದೆ ಸಾಗಬೇಕಾಗಿದೆ ಇದು ಎರಡನೇ ವರ್ಷ ಕಾರ್ಯಕ್ರಮವು ಇದು ಆಗಿರುತ್ತದೆ ತನು ಮನ ಧನದಿಂದ ಸಹಕರಿಸಿದ ಎಲ್ಲರಿಗೂ ಕೂಡ ಧನ್ಯವಾದಗಳು ಎಂದು ನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲೆ ಜಿಲ್ಲಾಧಿಕಾರಿಗಳಾದ ಎಂಎಸ್ ದಿವಾಕರ್ ರವರು ಮಾತನಾಡಿ ಒಂದು ಸಮಾಜವು ಮುಂದೆ ಬರಬೇಕಾದರೆ ಶಿಕ್ಷಣವು ಕೂಡ ಅತ್ಯವಶ್ಯಕವಾಗಿರುತ್ತದೆ ಉನ್ನತ ಹುದ್ದೆಯನ್ನು ಸೇರುವುದರಿಂದ ಒಂದು ಕುಟುಂಬ ಬೆಳೆಯುವುದರ ಜೊತೆಗೆ ಸಮಾಜವು ಕೂಡ ಬೆಳೆಯುತ್ತದೆ ಎತ್ತರದ ಗುರಿ ಮತ್ತು ಸತತ ಪ್ರಯತ್ನ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ತಾವು ಅತ್ಯುತ್ತಮ ಸಾಧನೆ ಮಾಡಿದರೆ ಸನ್ಮಾನವುಗಳು ಕೂಡ ಸಾಲಗಿ ಹುಡುಕಿ ಕೊಂಡು ಬರುತ್ತವೆ ನಾನು ಒಂದನೇ ತರಗತಿಯಿಂದ ಎಂ.ಎಸ್.ಸಿ ಮುಗಿಯುವ ವರೆಗೂ ಕೂಡ ಒಂದು ಸನ್ಮಾನವೂ ಕೂಡ ಆಗಿಲ್ಲ ಆದರೆ ನೀವು 10 ನೇ. ತರಗತಿ ಇರುವಾಗ ಸಮಾಜ ನಿಮ್ಮನ್ನು ಗುರುತಿಸಿ ಸನ್ಮಾನ ಮಾಡುತ್ತಿದೆ ನೀವು ಅದೃಷ್ಟವಂತರು ಎಂದರೆ ತಪ್ಪಾಗಲಾರದು ನಮ್ಮಲ್ಲಿ ಮೇಲು ಕೀಳು ಎಂಬ ಭಾವನೆ ಇರಬಾರದು ಪ್ರತಿಯೊಬ್ಬ ವ್ಯಕ್ತಿ ಕೂಡ ತನ್ನದೇ ಆದಂತಹ ಕೌಶಲ್ಯವನ್ನು ಹೊಂದಿರುತ್ತಾನೆ ವಿದ್ಯಾರ್ಥಿಗಳಿಗೆ ಶುಭವಾಗಲಿ ಎಂದು ಹಾರೈಸಿ ಸನ್ಮಾನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಹೆಚ್. ಶೇಷರವರು ಮಾತನಾಡಿ ವಿಜಯನಗರ ಜಿಲ್ಲೆ ಮಾದಿಗ ಮಹಾಸಭಾ ನಿರಂತರವಾಗಿ ಪ್ರತಿಭ ಪುರಸ್ಕಾರ ಕಾರ್ಯಕ್ರಮವನ್ನು ಮತ್ತು ಸಮಾಜ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿರುತ್ತವೆ ಸಮಾಜದಲ್ಲಿ ಶಿಕ್ಷಣ ಎಂಬುದು ಬಹು ಮುಖ್ಯವಾಗಿರುತ್ತದೆ ಶಿಕ್ಷಣವನ್ನು ಪಡೆದವರು ಏನನ್ನಾದರೂ ಸಾಧಿಸಬಲ್ಲರು ಎನ್ನುವಂತ ಜೊತೆಗೂಡಿ ನಮ್ಮ ಸಮಾಜವು ಅನ್ಯಾಯಕ್ಕೆ ಒಳಗಾದಾಗ ನಮ್ಮ ಸಂಘದ ವತಿಯಿಂದ ಅವರನ್ನು ರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ ಮತ್ತು ಇನ್ನಿತರ ನಮ್ಮ ಸಮಾಜಕ್ಕೆ ಧಕ್ಕೆಯಾದಾಗ ಅಲ್ಲಿ ಕೂಡ ನಮ್ಮ ಸಂಘದ ಭಾಗಿತ್ವ ಇರುತ್ತದೆ ಎಂದು ಮಾತನಾಡಿದರು.

ದಿವ್ಯ ಸಾನಿಧ್ಯವನ್ನು ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಪೂರ್ಣಾಂದ ಭಾರತಿ ಸ್ವಾಮೀಜಿಗಳು ಮಾತಂಗ ಪರ್ವತ ಹಂಪಿ ವಹಿಸಿ ಇವರು ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ನಗರ ಸಭೆ ಪೌರಾಯುಕ್ತ ಶಿವಕುಮಾರ್, ಮಾದಿಗ ಸಮಾಜದ ಗಣ್ಯರಾದ ಎಂ.ಸಿ ವೀರಸ್ವಾಮಿ, ಡಾ, ಬಿ.ಆರ್ ಅಂಬೇಡ್ಕರ್ ಸಂಘ ಅಧ್ಯಕ್ಷರಾದ ಕೆ.ಪಿ ಉಮಾಪತಿ, ಬಲ್ಲಹುಣಸಿ ರಾಮಣ್ಣ, ಸೋಮಶೇಖರ್ ಕಮಲಾಪುರ, ಪೂಜಾಪ್ಪ,ಕೆ ಉಚ್ಚಂಗಪ್ಪ, ಹಡಗಲಿ, ನಿಂಗಪ್ಪ, ಪಿ.ಸಂತೋಷ್ ಕುಮಾರ್, ಕೊಟ್ರೇಶ್, ನಾಗಪ್ಪ, ಲಕ್ಷ್ಮಣ ಹಾಗೂ ಮಾದಿಗ ಮಹಾಸಭಾ ಕಾರ್ಯಧ್ಯಕ್ಷರಾದ ಶ್ರೀನಿವಾಸ್ ಎಚ್ ಉಪಾಧ್ಯಕ್ಷರಾದ ಕರಿಯಪ್ಪ, ಬಿ ಹನುಮಂತಪ್ಪ ಜಿ ಪಂಪಾಪತಿ ವಿಜಯ್ ಕುಮಾರ್, ರವಿ ನಿಂಗಪ್ಪ ಆಗೋಲಿ ಸುಹೇಲ್ ಸೇರಿದಂತೆ ಪ್ರಧಾನ ಕಾರ್ಯದರ್ಶಿ ಭರತ್ ಕುಮಾರ್ ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**


## ದಲಿತ ಭೂಮಿ ವಸತಿ ಹಕ್ಕಿಗಾಗಿ ಧರಣೆ ಪ್ರತಿಭಟನೆ



**ಸಿಹಿ ಕಹಿ ಸುದ್ದಿ,**
**ಆಲಮೇಲ :** ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ತಹಶಿಲ್ದಾರರು ಕಛೇರಿ ಮುಂದೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ತಾಲೂಕು ಸಮಿತಿ ಆಲಮೇಲ್ ದಲಿತರ ಭೂಮಿ ವಸತಿ ಹಕ್ಕಿಗಾಗಿ ಮತ್ತು ಇತರೆ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಪ್ರತಿಭಟನೆ ಧರಣಿ ಕರ್ನಾಟಕ ರಾಜ್ಯದಾದ್ಯಂತ ತಹಸೀಲ್ದಾರ್ ಕಚೇರಿ ಎದುರುಗಡೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ದಲಿತರ ಭೂಮಿ ವಸತಿ ಹಕ್ಕಿಗಾಗಿ ಮತ್ತು ಇತರ ಹಕ್ಕೋತ್ತಾಯಗಳಿಗೆ ಆಗ್ರಹಿಸಿ ಪ್ರತಿಭಟನೆ ಧರಣಿಯಲ್ಲಿ ಡಿಎಸ್ಎಸ್ ಜಿಲ್ಲಾ ಅಧ್ಯಕ್ಷರಾದ ಶಿವುಕುಮಾರ್ ಮೇಲಿನಮನಿ ಮಾತನಾಡಿ ಸರ್ಕಾರ ಜಮೀನು ಉಳುಮೆ ಮಾಡುತ್ತಿರುವ ರೈತರಿಗೆ ಹಕ್ಕುಪತ್ರ ನೀಡಬೇಕು ಎಂದು ಹೇಳಿದರು. ಹಾಗೂ ತಾಲೂಕು ತಹಶಿಲ್ದಾರರ ಕಛೇರಿಯ ಶಿರಸ್ತೆದಾರರಾದ ಪಿ.ಎಸ್ ಮುಖಿಹಾಳ ಇವರಿಗೆ ಮನವಿ ನೀಡಿ-ದರು ಡಿಎಸ್ಎಸ್ ಅಧ್ಯಕ್ಷರಾದ ಶಶಿಧರ ನಾಯ್ಕೋಡಿ ನೇತ್ರತ್ವದಲ್ಲಿ ಧರಣಿಯನ್ನು ನಡೆಸಲಾಯಿತು. ಡಿ.ಎಸ್.ಎಸ್ ಸಂಚಾಲಕರು ಸಂಜು ಮೇಲಿಮನಿ ಮುತ್ತು ಎಂಟಮನ, ಸಲೀಮ್ ತಾಂಬುಳಿ ರಾಜು ಮೇತ್ರಿ, ಮತ್ತು ಡಿ.ಎಸ್.ಎಸ್ ಸರ್ವ ಸದಸ್ಯರು ಹಾಗೂ ಪೊಲೀಸ್ ಠಾಣೆಯ ಎ.ಎಸ್.ಐ ಬಿ.ಎಸ್ ದುರ್ಲೆಕರ ಅವರು ಉಪಸ್ಥಿತರಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ,ದೇವರ ಹಿಪ್ಪರಗಿ**

## "ಶ್ರೀರಾಮನಾಮದ ಹಿರಿಮೆ-ಗರಿಮೆ"



**ಸಿಹಿ ಕಹಿ ಸುದ್ದಿ,**
ಮೊದಲಿಗೆ ಜನ್ಮ ನೀಡಿದ ತಾಯಿ-ತಂದೆಯರಿಗೆ ಹಾಗೂ ಶ್ರೀಗುರುನಾಥರ ದಿವ್ಯ ಪಾದಪದ್ಮಗಳಿಗೆ ಭಕ್ತಿ ಪೂರ್ವಕವಾಗಿ ನಮಸ್ಕರಿಸುತ್ತ "ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್! ಆರುಹ್ಯ ಕವಿತಾ ಶಾಕಾಮ್ ವಂದೇ ವಾಲ್ಮೀಕಿ ಕೋಕಿಲಮ್!! ರಾಮಾಯಣ ಹಾಗೂ ಮಹಾಭಾರತ ನಮ್ಮ ಭಾರತ ದೇಶದ ಇತಿಹಾಸಗಳು ಇದಕ್ಕೆ ಅನೇಕ ಸಾಕ್ಷಿಗಳಿವೆ, ರಾಮಸೇತು, ಮಧ್ಯಪ್ರದೇಶದಲ್ಲಿರುವ ಚಿತ್ರಕೂಟ ಪ್ರದೇಶದಲ್ಲಿ ಸಾವಿರಾರು ಸಾಕ್ಷಿಗಳನ್ನು ನಾವು ಈಗಲೂ ಕಾಣಬಹುದು, ನಮ್ಮ ಭಾರತ ಸಂವಿಧಾನದ ಭಾಗ ಎರಡರಲ್ಲಿ ರಾಮ ರಾಜ್ಯದ ಉಲ್ಲೇಖವಿದೆ, ಭಾರತ ಸಂವಿಧಾನದ ಪುಸ್ತಕದ ಮೇಲೆ ಶ್ರೀಸೀತಾರಾಮ ಲಕ್ಷ್ಮಣರ ಮುಖ ಚಿತ್ರವಿದೆ. ಶ್ರೀರಾಮನ ಜೀವನ ಚರಿತ್ರೆ ಎಂದರೆ "ನಡೆದಾಡುವ ಭಗವದ್ಗೀತೆ" ಆಗಿದೆ. ಇದು ಮಾನವ ಜನ್ಮದ ಕರ್ತವ್ಯ ಬೋಧನೆಯನ್ನು ಮಾಡುತ್ತದೆ. ನಮ್ಮ ಶಾಸ್ತ್ರದಲ್ಲಿ ಹೇಳುವಂತೆ ನುಡಿಗಳಲ್ಲಿ ಪರಮ ಮಂಗಳ ಕರವಾದ ಶಬ್ದವೆಂದರೆ "ಶ್ರೀರಾಮ" ಎನ್ನುವ ಪದವಾಗಿದೆ, ಋಗ್ವೇದದಲ್ಲಿರುವ ಏಳು ಕೋಟಿ ಮಂತ್ರಗಳಲ್ಲಿ ರಾಮನಾಮ ತಾರಕ ಮಂತ್ರವಾಗಿದೆ. ರಾ ಎಂದರೆ "ಅಗ್ನಿಬೀಜ ಮಂತ್ರ" ಮಾ ಎಂದರೆ "ಅಮೃತ ಬೀಜ ಮಂತ್ರ"ವಾಗಿದೆ. ರಾಮನಾಮವನ್ನು ಮೂರು ಬಾರಿ ಹೇಳಿದರೆ ಸಾವಿರ ಬಾರಿ ಹೇಳಿದ ಫಲಿತ ಬರುತ್ತದೆ ಎಂದು ಸಾಕ್ಷಾತ್ ಶಿವನೇ ಪಾರ್ವತಿ ದೇವಿಯ ಹತ್ತಿರ ಹೇಳಿದ್ದಾರೆ. ಅದಕ್ಕಾಗಿ ನಮ್ಮ ಹಿರಿಯರು ನಾವು ಮಾತನಾಡುವ ನಿತ್ಯ ಆಡು ಭಾಷೆಯಲ್ಲಿ ರಾಮ ನಾಮವನ್ನು ಸೇರಿಸಿದ್ದಾರೆ. ಸಂತೋಷದಲ್ಲಾದರೂ ದುಃಖದಲ್ಲಾದರೂ, ರಾಮ ನಾಮವನ್ನು ಅಪ್ರಯತ್ನಿಕವಾಗಿ ಪ್ರತಿಯೊಬ್ಬ ಸನಾತನ ಭಾರತೀಯರು ಹೇಳೇ ಹೇಳುತ್ತಾರೆ, ಉದಾಹರಣೆಗೆ ಅಯ್ಯೋ ರಾಮ, ರಾಮ ರಾಮ, ಅಯ್ಯೋ ರಾಮ ಕರ್ಮ, ಇದು ಒಳ್ಳೆಯ ರಾಮಾಯಣವಾಯಿತು ಎಂದು ಮಾತುಗಳ ಮಧ್ಯದಲ್ಲಿ ಹೇಳುವುದನ್ನು ನಾವು ಪ್ರತಿ ದಿನವೂ ಕೇಳುತ್ತೇವೆ. ವಾಲ್ಮೀಕಿ ಮಹರ್ಷಿಗಳು ರಚಿಸಿರುವ 24 ಸಾವಿರ ಶ್ಲೋಕವಿರುವ ಶ್ರೀಮದ್ ರಾಮಾಯಣವು 24 ಬೀಜಾಕ್ಷರವಿರುವ ಮಂತ್ರ ರಾಜವಾಗಿರೋ ಗಾಯತ್ರಿ ಮಹಾ ಮಂತ್ರಕ್ಕೆ ಪೂರ್ಣ ವ್ಯಾಖ್ಯಾನವೆಂದು ಪಂಡಿತರು ಹೇಳುತ್ತಾರೆ, ಶ್ರೀರಾಮನಾಮ ಮಹಿಮೆಯನ್ನು ತಿಳಿಸುವ ಉಪನಿಷತ್ತು "ಶ್ರೀರಾಮ ರಹಸ್ಯೋಪ ನಿಷತ್" ಸದಾಶಿವನು ಧ್ಯಾನದಲ್ಲಿ ಜಪಿಸುವ ನಾಮ ಶ್ರೀರಾಮನ ನಾಮ. ಶೃಂಗೇರಿ ಶಾರದಾಂಬೆ ಕೈಯಲ್ಲಿ ಜಪಮಾಲೆಯನ್ನು ನಾವು ದರ್ಶಿಸುತ್ತೇವೆ. ಆ ಜಗನ್ಮಾತೆ ಜಪಿಸುವುದು ಶ್ರೀರಾಮನ ನಾಮ, ಗಣಪತಿ ಕೈಯಲ್ಲೂ ಸಹ ನಾವು ಜಪಮಾಲೆಯನ್ನು ದರ್ಶಿಸುತ್ತೇವೆ. ಗಣಪತಿ ಜಪಿಸುವುದು ಸಹ ಶ್ರೀರಾಮನ ನಾಮವಂತೆ, ವಾನರರಾಗಿ ಜನಿಸಿ ಭವಿಷ್ಯತ್ ಬ್ರಹ್ಮರಾಗಿ ಚಿರಂಜೀವಿಗಳಾದ ಹನುಮಂತರು ರೋಮರೋಮದಲ್ಲಿ ತುಂಬಿಕೊಂಡಿರುವುದು ಶ್ರೀರಾಮನ ನಾಮ, ಗುರು ಸಾರ್ವಭೌಮರು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು ಜಪಿಸಿರುವ ನಾಮ ಶ್ರೀರಾಮನಾಮ, ರಾಘವೇಂದ್ರ ಸ್ವಾಮಿಗಳು ಅರ್ಚಿಸಿರುವುದು ಮೂಲರಾಮನನ್ನು, ಶ್ರೀರಾಮಕೃಷ್ಣ ಪರಮಹಂಸರು ಬಾಲ್ಯದಲ್ಲಿ ಜಪಿಸಿರುವ ನಾಮ "ರಘುವೀರ" ಎನ್ನುವ ಶ್ರೀರಾಮನ ನಾಮ, ಸನಾತನ ಹಿಂದೂ ಧರ್ಮದ ಖ್ಯಾತಿಯನ್ನು ಭೂಮಂಡಲದ ಎಲ್ಲಾ ದಿಕ್ಕಿಗೂ ಸಾರಿದ ವೀರಸನ್ಯಾಸಿಯಾದ ಸ್ವಾಮಿ ವಿವೇಕಾನಂದರಿಗೆ ಶ್ರೀರಾಮಕೃಷ್ಣ ಪರಮಹಂಸರು ರಾಮ ನಾಮವನ್ನು ಉಪದೇಶವಾಗಿ ನೀಡಿದ್ದಾರೆ. ನಮ್ಮ ಪರಮಪೂಜ್ಯ ಗುರುನಾಥರು ಶ್ರೀಶ್ರೀ ಮಹಾರಣ್ಯಂ ಮುರಳೀಧರ ಸ್ವಾಮೀಜಿ ಅವರು ಮತ್ತೆ ಭೂಮಿ ಮೇಲೆ ಜನಿಸಿ ಬಂದ ಚೈತನ್ಯ ಮಹಾಪ್ರಭುಗಳ ಅವತಾರವೇ ಅದ ಅವರು ಚೈತನ್ಯ ಮಹಾಪ್ರಭುಗಳಂತೆ ನಮ್ಮ ಗುರುನಾಥರು ಸಹ ದೇಶ ವಿದೇಶಗಳಲ್ಲಿ ಮಹಾಮಂತ್ರವನ್ನು ಪ್ರಚಾರ ಮಾಡಿದ್ದಾರೆ. "ಹರೇ ರಾಮ ಹರೇ ರಾಮ! ರಾಮ ರಾಮ ಹರೇ ಹರೇ!! ಹರೇ ಕೃಷ್ಣ ಹರೇ ಕೃಷ್ಣ! ಕೃಷ್ಣ ಕೃಷ್ಣ ಹರೇ ಹರೇ!! ಎನ್ನುವ ಭಗವಂತನ ನಾಮವನ್ನು ಭಿಕ್ಷೆಯಾಗಿ ಪಡೆಯುತ್ತಿರುವ ಆದಿ ಬಿಕ್ಷು ಸ್ವರೂಪಿಗಳು. ಶ್ರೀರಾಮನ ನಾಮ ಜಪಿಸುವುದಕ್ಕೆ ಯಾವುದೇ ನಿಯಮವಿಲ್ಲ, ಕಲಿಯುಗದಲ್ಲಿ ಪಂಡಿತರಿಂದ ಪಾಮರರ ವರೆಗೂ ಸ್ತ್ರೀ ಪುರುಷರ ಭೇದವಿಲ್ಲದೆ ಭಗವಂತನ ನಾಮವನ್ನು ಜಪಿಸುವುದರಿಂದ ದುಃಖವನ್ನು ನೀಗಿಸಿ, ಮತ್ತೆ ಗರ್ಭವಾಸ ಬರದಂತೆ ಕಾಯ್ದು ಮುಕ್ತಿಯನ್ನು ಸಹ ನೀಡುತ್ತದೆ. ಅತ್ಯಂತ ಸುಲಭವಾಗಿರುವ ಶ್ರೀರಾಮನ ನಾಮ ಜಪಿಸುವುದರಿಂದ ಮಾನವರಲ್ಲಿ ಯೋಗಸಿದ್ಧಿ ಬೆಳೆಯುತ್ತದೆ. ಭಗವಂತನ ನಾಮದಲ್ಲಿ ಯೋಗ, ಯಜ್ಞ, ತೀರ್ಥ, ದೈವವು ಸಹ ನೆಲೆಸಿರುತ್ತದೆ. ಶ್ರೀರಾಮ ನಾಮಸ್ಮರಣೆಯ ಬಲದಿಂದಲೇ ಸ್ವಾಮಿ ಹನುಮಂತರು ಸಮುದ್ರ ಲಂಘನ ಮಾಡಿ ಸೀತಾ ಮಾತೆಯನ್ನು ದರ್ಶಿಸಿದ ನಂತರ ಲಂಕಾ ದಹನವನ್ನು ಮಾಡುವ ಶಕ್ತಿಯನ್ನು ನೀಡಿದ್ದು ಈ ರಾಮನಾಮವವೇ. ಲಂಕಾ ಪಟ್ಟಣದಲ್ಲಿ ಜಗನ್ಮಾತೆಯಾದ ಸೀತೆಯು ಒಂಟಿಯಾಗಿದ್ದಾಗ ದಶಕಂಠ ರಾವಣನು ಸೀತಾ ಮಾತೆಯ ನೆರಳನ್ನು ಸಹ ತಾಕದೆ ರಕ್ಷಿಸಿದ್ದು ಈ ಶ್ರೀರಾಮನ ನಾಮವೇ, ಮಾತೆ ಶಬರಿಗೆ ಮುಕ್ತಿಯನ್ನು ನೀಡಿದ್ದು ಶ್ರೀರಾಮನ ನಾಮ, ದುಷ್ಟರಾದ ಕೌರವರಿಂದ ವಸ್ತ್ರಾಭ ಹರಣ ಸಂದರ್ಭದಲ್ಲಿ ಮಾತೆ ದ್ರೌಪದಿಯನ್ನು ರಕ್ಷಿಸಿದ್ದು ಭಗವಂತನ ನಾಮ ಸ್ಮರಣೆ-ಯಾಗಿದೆ. ಪರಮ ಪೂಜ್ಯ ಗುರುಗಳು ಮುರಳೀಧರ ಸ್ವಾಮೀಜಿಯವರು ಹೇಳುತ್ತಾರೆ:- ಭಗವಂತನ ನಾಮ ಸ್ಮರಣೆಯಿಂದ ದೇವರು ಕಾಣುತ್ತಾನೆ ಹಾಗೂ ಭಗವಂತ ನಮ್ಮೊಂದಿಗೆ ಮಾತನಾಡುತ್ತಾನೆ ಎಂದು ಈ ವಾಕ್ಯಕ್ಕೆ ನಿದರ್ಶನವೆನ್ನುವಂತೆ ಮುರಳೀಧರ ಸ್ವಾಮೀಜಿಯವರ ಶಿಷ್ಯರಾದ ನಮ್ಮ ಗುರುಗಳು ಶ್ರೀನಾಮಶೇಖರ್ ಜೀ, ಅವರು ತಮ್ಮ ಗುರುಗಳ ಬೋಧನೆಯನ್ನು ತ್ರಿಕರಣ ಶುದ್ಧಿಯಾಗಿ ನಂಬಿ, ಭಗವಂತನ ನಾಮವನ್ನು ಜಪಿಸುತ್ತಾ ಭಗವಂತನ ನಾಮ ಪ್ರಚಾರದಲ್ಲಿ ನಾಮ ಭಿಕ್ಷೆಯನ್ನು ಪಡೆಯುತ್ತಾ ಜೀವನವನ್ನು ಸಾಗಿಸುತ್ತಿರುವ ಈ ಮಹನೀಯರ ಜೀವನದಲ್ಲಿ ಕಳೆದ ವರ್ಷವೇ ವಿಸ್ಮಯವೆನ್ನುವಂತೆ ಪ್ರಸಿದ್ಧ ಹನುಮತ್ ಕ್ಷೇತ್ರದಿಂದ ಶ್ರೀಸೀತಾರಾಮ ಲಕ್ಷ್ಮಣ ಹನುಮಂತ ದೇವರ ಮೂರ್ತಿಗಳು ಹನುಮಂತನ ಅನುಗ್ರಹದಿಂದ ಈ ಮಹನೀಯರ ಕೈಯಲ್ಲಿ ಸೇವೆಯನ್ನು ಸ್ವೀಕರಿಸಲು ಸ್ವತಃ ಭಗವಂತನೇ ಇವರನ್ನು ಆಯ್ಕೆ ಮಾಡಿಕೊಂಡು ಈ ಮಹನೀಯರನ್ನು ಸೇರಿಕೊಂಡಿದ್ದಾರೆ. ಸಕಲ ವೇದಗಳ ಸಾರವಾಗಿರುವ ಸಕಲವನ್ನು ಮಾನವರಿಗೆ ದಯಪಾಲಿಸುವ ಜೀವ ಸಂಜೀವಿನಿ ಯಾಗಿರುವ ಅತ್ಯಂತ ಸುಲಭ ವಾಗಿರುವ ಭಗವಂತನ ನಾಮ ಸ್ಮರಣೆಯನ್ನು ಮಾಡಿ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳೋಣ ಅಲ್ಲವೇ....!

**ಹರಿನಾಮ ಸಂಕೀರ್ತನ್ ಕೀ ಜೈ!!**
**ಜೈ ಶ್ರೀರಾಮ್**

* * *



**ಲೇಖನ :**
**ಶ್ರೀ ಜಿ.ಲತಾ ಗೋವಿಂದರಾಜು, ಚಳ್ಳಕೆರೆ. ದೂರವಾಣಿ- 9148820569**

## ಇ-ಖಾತಾ ಅಭಿಯಾನ ಯಶಸ್ವಿ: 279 ಸಾರ್ವಜನಿಕರಿಂದ ನೊಂದಣಿ



**ಮಹಾಲಿಂಗಪುರ :** ಸ್ಥಳೀಯ ಪುರಸಭೆ ವತಿಯಿಂದ ಪಟ್ಟಣದ ಬಸವ ನಗರದ ಬಸವೇಶ್ವರ ಸಮುದಾಯ ಭವನದಲ್ಲಿ ಜುಲೈ 13 ರಂದು ಮುಂಜಾನೆ 9-30 ರಿಂದ ಸಂಜೆ 5-30 ಗಂಟೆಯವರೆಗೆ ನಡೆದ ಇ-ಆಸ್ತಿ ನೊಂದಣಿ ಅಭಿಯಾನದಲ್ಲಿ ಪಟ್ಟಣದ 279 ಜನ ಸಾರ್ವಜನಿಕರು ಪುರಸಭೆಯಲ್ಲಿ ತಮ್ಮ ಆಸ್ತಿಗಳನ್ನು ಇ-ಖಾತಾ ಅಭಿಯಾನದಲ್ಲಿ ನೊಂದಣಿ ಮಾಡಿಸಿದ್ದಾರೆ.

ಜಿಲ್ಲೆಯಲ್ಲಿಯೇ ಹೆಚ್ಚು ನೊಂದಣಿ :
ರವಿವಾರ ಬಾಗಲಕೋಟೆ ಜಿಲ್ಲೆಯಾದ್ಯಂತ ನಡೆದ ಇ-ಖಾತಾ ಅಭಿಯಾನದಲ್ಲಿ ಬಾಗಲಕೋಟೆ ಜಿಲ್ಲೆಯಲಿಯೇ ಅತಿಹೆಚ್ಚು ಜನ ಸಾರ್ವಜನಿಕರು ಮಹಾಲಿಂಗಪುರ ಪುರಸಭೆಯಲ್ಲಿ ಆಸ್ತಿಗಳನ್ನು ನೊಂದಣಿ ಮಾಡಿ ಇ-ಖಾತೆಯ ಉತಾರೆ ಪಡೆದು ಕೊಂಡಿದ್ದಾರೆ. ರವಿವಾರ ನಡೆದ ಅಭಿಯಾನದಲ್ಲಿ ಮಹಾಲಿಂಗಪುರ ಪುರಸಭೆಯಲ್ಲಿ ಜಿಲ್ಲೆಯಲ್ಲಿ ಒಂದೇ ದಿನ ಅತಿಹೆಚ್ಚು ಜನರು ನೊಂದಣಿ ಮಾಡಿಕೊಂಡಿದ್ದು ಸ್ವಾಗತಾರ್ಹ. ಇಂದು ನೊಂದಣಿಯಾದ ಯಾವುದೇ ಫೈಲ್ಗಳು ಪೆಂಡಿಂಗ್ ಉಳಿದಿಲ್ಲ ಎಂದು ಪುರಸಭೆಯ ಕಂದಾಯ ಅಧಿಕಾರಿ ಪಿ. ವೈ. ಸೊನ್ನದ ಧಡಲ್ ಬಾಜಿ ಪತ್ರಿಕೆಯ ವರದಿಗಾರನೊಂದಿಗೆ ಸಂತಸ ಹಂಚಿಕೊಂಡಿದ್ದಾರೆ.

ಇ-ಖಾತಾ ಅಭಿಯಾನ ಉದ್ಘಾಟಿಸಿದ ಪುರಸಭೆ ಮುಖ್ಯಾಧಿಕಾರಿ ನಾಮದೇವ ಲಮಾಣಿ ಮಾತನಾಡಿ ಇಲ್ಲಿಯವರೆಗೆ ಮಹಾಲಿಂಗಪುರ ಪುರಸಭೆಯಲ್ಲಿ 2,741 ಅಧಿಕೃತ (ಎ. ಖಾತಾ), 1,149 ಅನಧಿಕೃತ (ಬಿ. ಖಾತಾ) ಸೇರಿದಂತೆ 3,890 ಸಾರ್ವಜನಿಕರು ಇ-ಖಾತಾ ನೊಂದಣಿ ಮಾಡಿಕೊಂಡು ಉತಾರೆಗಳನ್ನು ಪಡೆದುಕೊಂಡಿದ್ದಾರೆ.

ಇಲ್ಲಿಯವರೆಗೆ ಇ-ಖಾತಾ ನೊಂದಣಿ ಮಾಡದ ಪಟ್ಟಣದ ಸಾರ್ವಜನಿಕರು ಜಿಲ್ಲಾಧಿಕಾರಿಗಳ ಆದೇಶದಂತೆ ಜುಲೈ 30 ರೊಳಗೆ ಅಗತ್ಯ ದಾಖಲೆಗಳೊಂದಿಗೆ ಪುರಸಭೆಗೆ ಆಗಮಿಸಿ ಆಸ್ತಿಗಳನ್ನು ನೊಂದಣಿ ಮಾಡಿಕೊಂಡು ಇ-ಖಾತಾ ಉತಾರೆಗಳನ್ನು ಪಡೆದುಕೊಳ್ಳಬೇಕೆಂದು ಪಟ್ಟಣದ ಸಾರ್ವಜನಿಕರಿಗೆ ವಿನಂತಿಸಿದರು. ಈ ಸಂದರ್ಭದಲ್ಲಿ

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಸದಸ್ಯರಾದ ಮುಸ್ತಾಕ ಚಿಕ್ಕೋಡಿ, ಚಾಂದನಿ ನಾಯಕ, ಸವಿತಾ ಹುರಕಡ್ಲಿ, ಬಸವ ನಗರದ ಮುಖಂಡರಾದ ಚನ್ನಬಸು ಹುರಕಡ್ಲಿ, ಬಸವರಾಜ ಗಿರಿಸಾಗರ, ಪುರಸಭೆ ವ್ಯವಸ್ಥಾಪಕ ಎಸ್. ಎನ್. ಪಾಟೀಲ, ಸಿಬ್ಬಂದಿ ಎಂ. ಕೆ. ದಳವಾಯಿ, ಎಸ್. ಬಿ. ಚೌಧರಿ, ಎಸ್. ಜಿ. ಕತ್ತಿ, ದುರ್ಗಪ್ಪ ಜಮಖಂಡಿ, ರಾಮು ಮಾಂಗ, ಈರಣ್ಣ ಕೊಪ್ಪದ, ಪ್ರಕಾಶ ಕಟಾಂವಿ, ಪರಶುರಾಮ ಬಂಡಿವಡ್ಡರ, ರವಿ ಹಲಸಪ್ಪಗೋಳ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

## ಗ್ಯಾರಂಟಿಗೆ ಹಣ ಹೊಂದಿಸಿದರೂ ಅಭಿವೃದ್ಧಿಗೆ ಹಣವಿಲ್ಲ: ಸವದಿ ಶಕ್ತಿ ಯೋಜನೆ: ಐನೂರು ಕೋಟಿ ಮಹಿಳಾ ಪ್ರಯಾಣಿಕರು



**ರಬಕವಿ-ಬನಹಟ್ಟಿ :** ಕಾಂಗ್ರೆಸ್ ಸರ್ಕಾರ ತನ್ನ ಆಡಳಿತ ನಡೆಸುವಲ್ಲಿ 'ಪಂಚ ಗ್ಯಾರಂಟಿ' ಯೋಜನೆ ಮೂಲಕ ಜನರಿಗೆ ಅವಕಾಶ ಒದಗಿಸಿದ್ದು ಸ್ವಾಗತಾರ್ಹ.

ಆದರೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿಯಾಗದೆ ತೀವ್ರವಾಗಿ ಹಿಂದುಳಿಯುವುದರಲ್ಲಿ ಕಾರಣವಾಗಿದೆಯೆಂದು ತೇರದಾಳ ಶಾಸಕ ಸಿದ್ದು ಸವದಿ ಸರ್ಕಾರದ ವಿರುದ್ಧ ಖಾರವಾಗಿ ಹರಿಹಾಯ್ದರು.

ಬನಹಟ್ಟಿ ಬಸ್ ನಿಲ್ದಾಣದಲ್ಲಿ ಸೋಮವಾರ ಶಕ್ತಿ ಯೋಜನೆಯಡಿ ಐನೂರು ಕೋಟಿ ಮಹಿಳಾ ಪ್ರಯಾಣಿಕರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಶಕ್ತಿ ಯೋಜನೆಯು ಚುನಾವಣೆಗೂ ಮೊದಲ ಕೊಟ್ಟ ಭರವಸೆಗಳು. ಜನತೆಗೆ ಪೂರಕವಾಗುವ ದೃಷ್ಟಿಕೋನ ಸ್ವಾಗತಾರ್ಹ. ಸಾರಿಗೆಯಲ್ಲಿ ಉಚಿತ ಪ್ರಯಾಣ ಒಂದು ಸಾಧನೆಯಾಗಿದೆ. ಕಡು ಬಡವರಿಗಾಗಿ ಒಂದೇ ಒಂದು ಮನೆ ನಿರ್ಮಾಣ ಮಾಡುವಲ್ಲಿ ಇಂದಿನ ಆಡಳಿತ ಅವಧಿಯಲ್ಲಿ ಸಾಧ್ಯವಾಗಿಲ್ಲವೆಂದು ಸವದಿ ಬೇಸರ ವ್ಯಕ್ತಪಡಿಸಿದರು.

'ಪಂಚ ಗ್ಯಾರಂಟಿ' ಯೋಜನೆಯ ಆರ್ಥಿಕ ಹೊರೆಯ ಬಗ್ಗೆ ಜನತೆಗೆ ಮನವರಿಕೆ ಮಾಡುತ್ತ, ದೈನಂದಿನ ವಸ್ತುಗಳ ಮೇಲೂ ಸಾಕಷ್ಟು ತೆರಿಗೆಗಳನ್ನು ವಿಧಿಸುವ ಮೂಲಕ ಗ್ಯಾರಂಟಿ ಹಣ ಹೊಂದಾಣಿಕೆ ಮಾಡಿರುವ ಸರ್ಕಾರ ಅಭಿವೃದ್ಧಿಗಾಗಿ ಯಾವುದೇ ಹಣ ಮೀಸಲಿಡದಿರುವದು ವಿಪರ್ಯಾಸ. ಇನ್ನೆರಡು ವರ್ಷಗಳ ಕಾಲ ಗ್ಯಾರಂಟಿಯ ನೆಪ ಹೇಳುತ್ತ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದಲ್ಲಿ ಮಾಡದೆ ಹೀಗೆಯೇ ಕಾಲಹರಣ ಮುಂದುವರೆಯಲಿದೆ ಎಂದು ಸವದಿ ತಿಳಿಸಿದರು.

ಸಾರಿಗೆ ನಿಯಂತ್ರಕರಾದ ಗಿರೀಶ ಮರನೂರ, ಆನಂದ ಮೈಗೂರ, ರಾಚಪ್ಪ ಹಿಪ್ಪರಗಿ, ಮಲ್ಲಿಕಾರ್ಜುನ ಬೋಲರಡ್ಡಿ, ರಮೇಶ ಮಹಿಷವಾಡಗಿ, ಸಚಿನ್ ಕ್ಷೀರಸಾಗರ, ನದಾಫ್ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದು: ಗಬಸಾವಳಗಿ




**ತಾಳಿಕೋಟೆ :** ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದು. ಹೊರಗಿನ ಆಕರ್ಷಣೆಗೆ ಮತ್ತು ಒತ್ತಡಗಳಿಗೆ ಒಳಗಾಗುತ್ತಿರುವ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಶಿಸ್ತಿನಡಿ ತರಬೇಕಾದರೆ ಶಾಲೆ ಮತ್ತು ಮನೆ ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ಜೆ ಎಸ್ ಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಸಾಹೇಬಗೌಡ ಗಬಸಾವಳಗಿ ಹೇಳಿದರು.

ತಾಲೂಕಿನ ಕೊಡಗಾನೂರ ಗ್ರಾಮದ ಬೇಲೂರು ಕ್ರಾಸ್ ಹತ್ತಿರ ಇರುವ ಜೆ ಎಸ್ ಎಸ್ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿರುವ "ಪಾಲಕರ ನಮನ" ಎಂಬ ಪಾಲಕರ ಸಭೆಯ ಕಾರ್ಯಕ್ರಮದಲ್ಲಿ ಮಾತನಾಡಿ, ಪೂರ್ವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಈ ಎರಡು ಹಂತಗಳು ವಿದ್ಯಾರ್ಥಿಯ ಕಲಿಕಾ ಜೀವನದಲ್ಲಿ ಪ್ರಮುಖವಾದ ಘಟ್ಟ. ಈ ಹೊತ್ತಿನಲ್ಲಿ ಪಾಲಕರು, ಶಿಕ್ಷಕರು ಮತ್ತು ಆಡಳಿತ ಮಂಡಳಿಯವರು ಒಟ್ಟಿಗೆ ಕೆಲಸ ಮಾಡಿ ಮಕ್ಕಳಿಗೆ ಉತ್ತಮ ಶಿಕ್ಷಣ ಜತೆಗೆ ಒಳ್ಳೆಯ ಸಂಸ್ಕಾರ ನೀಡುವದು ಅನಿವಾರ್ಯತೆ ಇದೆ. ತಂದೆ ತಾಯಿ ಮಕ್ಕಳಿಗೆ ಜನ್ಮ ಕೊಟ್ಟರೆ,

ಶಿಕ್ಷಕರು ಮಕ್ಕಳ ಜೀವನದಲ್ಲಿ ದಿಕ್ಕು ತೋರಿಸುವ ದೀಪದಂತೆ. ಅವರು ಮಕ್ಕಳಿಗೆ ಕೇವಲ ಪಾಠಗಳನ್ನು ಮಾತ್ರ ಕಲಿಸುವುದಿಲ್ಲ,

ಬದಲಾಗಿ ಅವರ ಭವಿಷ್ಯವನ್ನು ರೂಪಿಸು ಕಾರ್ಯ ಮಾಡುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿದ್ದನಗೌಡ ಗಬಸಾವಳಗಿ, ವಿಜಯಲಕ್ಷ್ಮಿ ?ಮ ಸಾಗಬಸಾವಳಗಿ, ಮಹದೇವ ತಳವಾರ, ವಿನಾಯಕ ಪಟಗಾರ, ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ಅನೇಕ ಪಾಲಕರು ಉಪಸ್ಥಿತರಿದ್ದರು.

# ನರ ಸತ್ತ ರಾಜ್ಯ ಕಾಂಗ್ರೇಸ್ ಸರ್ಕಾರ ಎಚ್ಚೆತ್ತುಕೊಳ್ಳಬೇಕು:ಜಿಗಜಿಣಗಿ

**ತಾಳಿಕೋಟೆ :** ಬೂದಿಹಾಳ ಪೀರಾಪೂರ ಏತ ನೀರಾವರಿ ಕಾಮಗಾರಿಗೆ ಹಿಂದಿನ ನಮ್ಮ ಬಿಜೆಪಿ ಸರ್ಕಾರವು ಎರಡು ಹಂತದಲ್ಲಿ ಒಮ್ಮೆ 796 ಕೋಟಿ ಮತ್ತು 800 ಕೋಟಿ ಹಣವನ್ನು ನೀಡಿ ಶೇ. 90 ರಷ್ಟು ಕಾಮಗಾರಿಯು 2 ವರ್ಷದ ಹಿಂದೆಯೇ ಮುಕ್ತಾಯಗೊಳಿಸಿದೆ ಆದರೆ ಈಗೀನ ನರ ಸತ್ತ ಕಾಂಗ್ರೇಸ್ ಸರ್ಕಾರ ಕೊನೆಯ ಹಂತದ ಕಾಮಗಾರಿಗೆ ಅವಶ್ಯವಿರುವ 170 ಕೋಟಿ ರೂ. ನೀಡಲು ಮೀನ ಮೇಷ ಏಣಿಸುತ್ತಿದೆ ಕೂಡಲೇ ಎಫ್‌ಐಸಿ ಕಾಲುವೆ ನಿರ್ಮಾಣಕ್ಕೆ ಹಣ ನೀಡಿ ಕಾಮಗಾರಿ ಪ್ರಾರಂಭಿಸಬೇಕೆಂದು ಮಾಜಿ ಕೇಂದ್ರ ಸಚಿವ ಹಾಲಿ ಸಂಸದ ರಮೇಶ ಜಿಗಜಿಣಗಿ ಅವರು ಹೇಳಿದರು.



ರವಿವಾರರಂದುತಾಲೂಕಿನಕೊಡಗಾನೂರ ಕ್ರಾಸ್‌ನಲ್ಲಿ ಬೂದಿಹಾಳ-ಫೀರಾಪೂರ ಏತ ನೀರಾವರಿಯೋಜನೆಗೆಸಂಬಂಧಿಸಿದಕೊನೆ ಹಂತದ ಎಫ್.ಐ.ಸಿ (ಹೊಲ ಗಾಲುವೆ) ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿ ಅಖಂಡ ಕರ್ನಾಟಕ ರೈತ ಸಂಘದ ನೇತೃತ್ವದಲ್ಲಿ ತಾಲೂಕಿನ 38 ಗ್ರಾಮಗಳ ರೈತಾಪಿ ಜನರು ನಡೆಸಿರುವ ಅಹೋರಾತ್ರಿ ಧರಣಿ ಸ್ಥಳಕ್ಕೆ ಬೆಟ್ಟಿ ನೀಡಿ ಬೆಂಬಲ ಸೂಚಿಸಿ ಮಾತನಾಡುತ್ತಿದ್ದ ಅವರು ಗ್ಯಾರೆಂಟಿ ಹೆಸರಿನ ಮೇಲೆ ಈಗೀನ ಕಾಂಗ್ರೇಸ್ ಸರ್ಕಾರ ಲೋಟಿ ಮಾಡುವದರಲ್ಲಿಯೇ ಕಾಲ ಕಳೆಯುತ್ತಿದೆ ಈ ಮೊದಲು ಸುಸಿಕ್ಷಿತರಾಗಿದ್ದ ಈಗೀನ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಲೂಟಿಕೋರರ ಮುಖಂಡರಂತೆ ಕೆಲಸ ಮಾಡುತ್ತಿರುವದು ಅತ್ಯಂತ ಖೇದಕರ ಸಂಗತಿಯಾಗಿದೆ ಎಂದರು. ಬೂದಿಹಾಳ-ಫೀರಾಪೂರ ಯೋಜನೆ ಪೂರ್ಣಗೊಳ್ಳಲು ಕೇವಲ170ಕೋಟಿರೂ.ಅಗತ್ಯವಿದೆಅದನ್ನು ಕೊಡಲು ಇವರಿಂದ ಆಗುತ್ತಿಲ್ಲಾ ಈಗೀನ ಕಾಂಗ್ರೇಸ್ ಸರ್ಕಾರಕ್ಕೆ ಮಾನವೀಯತೆ ಮನಷತ್ವವೆಂಬುದು ಇದ್ದರೆ ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ ಅವರು ಈ ಹಿಂದೆ ಇಂಡಿಯಲ್ಲಿ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಗೆ 2500 ಕೋಟಿ ರೂ. ಹಣ ಮಿಸಲಿಟ್ಟು ಪೂಜೆ ಮಾಡಿ ಕಾಮಗಾರಿಗೆ ಚಾಲನೆ ಕೊಟ್ಟಿದ್ದೇವೆ ಈಗ ಬಿಜೆಪಿ ಕೆಲಸಕ್ಕೆ ತಾವು ಮಾಡುತ್ತಿದ್ದೇವೆಂದು ಈಗ ಮತ್ತೇ ಪೂಜೆ ಮಾಡಲು ಬರುತ್ತಿದ್ದಾರೆ ಇದು ಎಂತಹ ದುರ್ದೈವ ಎಂಬುದು ಎಲ್ಲರೂ ನೋಡಬೇಕಾಗಿದೆ ಇಂಡಿ ತಾಲೂಕಿನಲ್ಲಿ ಕಾಲುವೆಗಳು ಒಡೆದು ಹೋಗಿರುವದನ್ನು ಮನಗಂಡು ಪ್ರಧಾನಿ ಮೋದಿಜಿ ಅವರಿಗೆ ಲೇಟರ್ ಕೊಟ್ಟು ಮನವಿ ಮಾಡಿದೆ ಅದಕ್ಕೆ ಪ್ರಧಾನಿಗಳು ಸಿಡಬ್ಲುಸಿ ಮಿಟಿಂಗ್ ಮಾಡಬೇಕಾದರೆ ಸುಮಾರು 10 ಸಬ್ಜಕ್ಟರ್ ಬೇಕಾಗತ್ತದೆ ಅದು ಯಾವುದೂ ಇಲ್ಲದೇ ಇಂಡಿ ಮತಕ್ಷೇತ್ರದ ಕೇನಾಲ್ ದುರಸ್ಥಿಗೆ ನಮ್ಮ ಪ್ರಧಾನಿ ನರೇಂದ್ರ ಮೋದಿಜಿ ಅವರು ಹಣ ನೀಡಿದ್ದಾರೆಂದರು.

ಮಾಜಿ ಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಅವರು ಮಾತನಾಡಿ ಬೂದಿಹಾಳ-ಫೀರಾಪೂರ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ನಾನು ಶಾಸಕನಿದ್ದಾಗ 1500 ಕೋಟಿ ರೂ. ಬೊಮ್ಮಾಯಿ ಸರ್‌ಗೆ ಮನವಿ ಮಾಡಿ ಬಿಡುಗಡೆ ಮಾಡಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವಂತಹ ಕೆಲಸ ಮಾಡಿದ್ದೇನೆ ಆದರೆ ಈಗ ಕೆಲವರು ನಾನು ಮಾಡಿದ್ದು ಎಂದೂ ಹೇಳಲು ಹೊರಟಿರುವದು ನಾಚಿಕೆ ಗೇಡಿನ ಸಂಗತಿಯಾಗಿದೆ ಬಿಜೆಪಿ ಸರ್ಕಾರದಲ್ಲಿ ಹುಟ್ಟಿದ ಬೂದಿಹಾಳ-ಫೀರಾಪೂರ ಎಂಬ ಕೂಸಿಗೆ ತಮ್ಮ ಹೆಸರು ಇಡಲು ಹೊರಟಿದ್ದಾರೆ ಸದ್ಯ ಈ ಯೋಜನೆಗೆ ಕೇವಲ 170 ಕೋಟಿ ರೂ. ಮಾತ್ರ ಬೇಕಿದೆ ಈ ಯೋಜನೆಗೆ ಪೂರ್ಣಗೊಂಡರೆ 55 ಸಾವಿರ ಏಕರೆ ಜಮೀನು ಸಂಪೂರ್ಣ ನೀರಾವರಿಗೆ ಒಳಪಡಲಿದೆ ರೈತರ ಶಾಪ ಕಾಂಗ್ರೇಸ್ ಸರ್ಕಾರವನ್ನು ಸುಮ್ಮನೇ ಬಿಡುವದಿಲ್ಲಾ ಇದನ್ನು ರಾಜ್ಯ ಸರ್ಕಾರದ ಮಂತ್ರಿಗಳು ತಿಳಿದುಕೊಂಡು ಕೂಡಲೇ ಈ ಯೋಜನೆ ಪೂರ್ಣಗೊಳಿಸಬೇಕೆಂದು ಒತ್ತಾಯಿಸಿದರು.

ಹೋರಾಟದ ನೇತೃತ್ವ ವಹಿಸಿದ ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರದಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಅವರು ಮಾತನಾಡಿ ಬೂದಿಹಾಳ-ಫೀರಾಪೂರ ಏತ ನೀರಾವರಿ ಯೋಜನೆಗೆ ಸಂಬಂದಿಸಿ ಈಗಾಗಲೇ 796 ಕೋಟಿ ಮತ್ತು 800 ಕೋಟಿ ಸೇರಿ 1500 ಕೋಟಿಗೂ ಮೇಲ್ಪಟ್ಟು ಖರ್ಚು ಮಾಡಲಾಗಿದೆ ಮುಖ್ಯ ಪೈಪಲೈನ್‌ದಿಂದ ಹಿಡಿದು ಉಳಿದ ಎಲ್ಲ ಕಾಮಗಾರಿಯೂ ಮುಕ್ತಾಯಗೊಂಡಿದೆ ಆದರೆ ಕೊನೆಯ ಹಂತದ ಹೊಲ ಗಾಲುವೆ ಕಾಮಗಾರಿಯು ಇಷ್ಟೋತ್ತಿಗಾಗಲೇ ಪೂರ್ಣಗೊಂಡುನೀರುಹರಿಯಬೇಕಾಗಿತ್ತು ಆದರೆ ಈಗೀನ ಸರ್ಕಾರ ಗ್ಯಾರೆಂಟಿ ಹೆಸರಿನ ಮೇಲೆ ಹಣ ಲೂಟಿ ಮಾಡಲು ಹೊರಟಿದೆ ಎಂದು ಆರೋಪಿಸಿದರು. ಸರ್ಕಾರದಲ್ಲಿ ಕೆಲಸ ಮಾಡುವ ಮಂತ್ರಿಗಳಿಗೆ ಇಚ್ಛಾಶಕ್ತಿ ಎಂಬುದು ಇರಬೇಕು ಅದು ಇರದಿದ್ದರೆ ಒಳ್ಳೆಯ ಕಾರ್ಯಗಳೆಲ್ಲವೂ ಅರ್ದಕ್ಕೆ ನಿಂತು ಹಾಳಾಗುತ್ತವೆ ಎಂಬುದು ಬೂದಿಹಾಳ-ಫೀರಾಪೂರ ನೀರಾವರಿ ಯೋಜನೆಯೇ ಸಾಕ್ಷೀಯಾಗಿದೆ ಕಾಂಗ್ರೇಸ್ ಕಸವೆಂಬುದು ಯಾವ ರೀತಿಯಾಗಿ ಕಿತ್ತೆಸೆಯೂತ್ತೇವೋ ಆ ರೀತಿ ಈ ಸರ್ಕಾರವನ್ನು ರೈತರೇ ಕಿತ್ತೇಸೆಯೂ ಸಂದರ್ಬ ಹತ್ತಿರ ಬರುತ್ತಿದೆ ಎಂದ ಅವರು ಈ ಯೋಜನೆಯು ಪೂರ್ಣಗೊಂಡರೆ ತಾಳಿಕೋಟೆ ತಾಲೂಕಿನ 38 ಗ್ರಾಮಗಳ ರೈತರಿಗೆ ಅನೂಕೂಲವಾಗಲಿದೆ ಅಲ್ಲದೇ ತಾಲೂಕಿನ 55 ಸಾವಿರ ಏಕರೆ ಪ್ರದೇಶ ನೀರಾವರಿಗೊಳಪಡಲಿದೆ ಇದಕ್ಕೆ ಸದ್ಯ ಅಗತ್ಯವಿರುವ 170 ಕೋಟಿ ಅನುದಾನವನ್ನು ಸರ್ಕಾರವು ಸೀಘ್ರವೇ ಬಿಡುಗಡೆಗೊಳಿಸಿ ಮುಂದುವರೆದ ಕಾಮಗಾರಿಯನ್ನು ಪ್ರಾರಂಬಿಸಬೇಕೆಂದು ಒತ್ತಾಯಿಸಿದರು.

ಇನ್ನೋರ್ವ ನಿಕಟಪೂರ್ವ ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಮಾತನಾಡಿ ಬೂದಿಹಾಳ-ಫೀರಾಪೂರ ಏತ ನೀರಾವರಿ ಯೋಜನೆಯ ಕೊನೆಯ ಹಂತದ ಕಾಮಗಾರಿಯು ಈಗಾಗಲೇ ಮುಕ್ತಾಯಗೊಂಡು ನೀರು ಹರಿಯಬೇಕಾಗಿತ್ತು ಸರ್ಕಾರದ ನಿರ್ಲಕ್ಷದಿಂದ ಇಡೀ ಯೋಜನೆಯೇ ಹಳ್ಳ ಹಿಡಿಯುವ ಹಂತಕ್ಕೆ ಬರುತ್ತಿದೆ ಕೂಡಲೇ ಸರ್ಕಾರದ ಜನಪ್ರತಿನಿಧಿಗಳು ಜಿಲ್ಲಾ ಉಸ್ತುವಾರಿ ಸಚಿವರು ಮುಂದುವರೆದ ಕಾಮಗಾರಿ ಪೂರ್ಣಗೊಳಿಸಲು ಸೂಕ್ತಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

# ನಂಜನಗೂಡು ರಾಯರ ಮಠದ 19ನೇ ವರ್ಧಂತಿ ಆಚರಣೆ

**ವಿಜಯಪುರ :** ಇಲ್ಲಿಯ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳ ಮಠದ 19ನೇ ವರ್ಧಂತಿ ಉತ್ಸವವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.ಅದರಂಗವಾಗಿ ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ, ಅಷ್ಟೋತ್ತರ ನಡೆದು, ಬಳಿಕ ವೃಂದಾವನಕ್ಕೆ ಪಂಚಾಮೃತ ಅಭಿಷೇಕ ಮಾಡ ಲಾಯಿತು.11 ಗಂಟೆಗೆ ರಥೋತ್ಸವ



ಜರುಗಿ ಬಳಿಕ ಪ್ರಲ್ಹಾದರಾಜರಿಗೆ ಕನಕಾಭಿಷೇಕ ನಡೆದು, ಭಕ್ತರಿಂದ ಭಜನೆ ಮೂಲಕ ದೇವರ ನಾಮಸ್ಮರಣೆ ಎಲ್ಲರ ಮನಸೆಳೆಯಿತು.ಶ್ರೀಮಠವನ್ನು ತೋರಣ ಬಾಳೆಕಂಬಗಳಿಂದ ಅಲಂಕರಿಸಲಾಗಿತ್ತು.

ಮಠದ ಅರ್ಚಕರಾದ ರವಿ ಆಚಾರ್ಯ ಹಾಗೂ ಶ್ರೀಧರಾಚಾರ್ಯ ವೃಂದಾವನಕ್ಕೆ ಬಗೆಬಗೆಯ ಹೂಮಾಲೆಗಳಿಂದ ಅಲ ಂಕರಿಸಿದ್ದರು.

ರಥೋತ್ಸವದ ಬಳಿಕ ಪ್ರವಚನ ನೀಡಿದ ಪಂಡಿತ ಡಾ. ಕೃಷ್ಣಾಚಾರ್ಯ ಕಾಖಂಡಕಿ, " ವರ್ಧಂತಿ ಸುಸಂದರ್ಭದಲ್ಲಿ ಉನ್ನತಿಯ ಆಲೋಚನೆ ಹೊಂದುವದು ಅತ್ಯವಶ್ಯವಾಗಿದೆ. ಈಚಿನ ದಿನಗಳಲ್ಲಿ ಮಾನವೀಯತೆ ಕಡಿಮೆಯಾಗುತ್ತಿರುವ ಸಮಯದಲ್ಲಿ ಗುರುರಾಯರ ಸನ್ನಿಧಿಯಲ್ಲಿ ಭಕ್ತಿ ಶ್ರದ್ಧೆಯಿಂದ ನಮಿಸಿ ಅವರ ಆಶೀರ್ವಾದ ಪಡೆದುಕೊಳ್ಳುವದು ಅಗತ್ಯವಾಗಿದೆ ಎಂದು ನುಡಿದರು.


ಶ್ರೀಮಠದ ವಿಚಾರಣಾಕರ್ತ ಗೋಪಾಲ ನಾಯಕ, ಮಧ್ವೇಶಾಚಾರ್ಯ ಮುತ್ತಗಿ, ವಾರಕರ,

ವಿಜಯೀಂದ್ರ ಡಿ. ಜೋಶಿ,ಶ್ರೀಕೃಷ್ಣ ಪಡಗಾನೂರ, ಅಶೋಕ ತಾವರಗೇರಿ, ಮರಳಿ ಬಂಡಾಚಾರ್ಯ ಜೋಶಿ,ಶ್ರೀಧರ ಜೋಶಿ(ಮುತ್ತಗಿ), ಬಿ ಜಿ. ಜೋಶಿ, ಡಿ ಆರ್ ನಾಡಿಗ, ಮುಂತಾದವರು ಭಾಗವಹಿಸಿದ್ದರು.

# ಆಲಮಟ್ಟಿ ಜಲಾಶಯ | 20 ಸಾವಿರ ಕ್ಯೂಸೆಕ್‌ಗೆ ಹೊರಹರಿವು ಇಳಿಕೆ

**ಆಲಮಟ್ಟಿ:** ಆಲಮಟ್ಟಿ ಜಲಾಶಯದ ಒಳಹರಿವು ಕಡಿಮೆಯಾದ ಕಾರಣ, ಹೊರಹರಿವನ್ನು ಭಾನುವಾರ ಕಡಿತಗೊಳಿಸಲಾಗಿದೆ.

ಶನಿವಾರ ಬೆಳಿಗ್ಗೆ 80 ಸಾವಿರ ಕ್ಯೂಸೆಕ್ ಇದ್ದ ಹೊರಹರಿವನ್ನು ಸಂಜೆಯ ವೇಳೆಗೆ 42,500 ಕ್ಯೂಸೆಕ್‌ಗೆ ಇಳಿಸಲಾಗಿತ್ತು. ಭಾನುವಾರ ಬೆಳಿಗ್ಗೆ 10ಕ್ಕೆ ಹೊರಹರಿವನ್ನು 20,000 ಕ್ಯೂಸೆಕ್‌ಗೆ ಇಳಿಸಲಾಗಿದೆ. ಕಳೆದ ಒಂದು ತಿಂಗಳಿಂದ ಜಲಾಶಯದ ನೀರನ್ನು ಗೇಟ್‌ಗಳ ಮೂಲಕ ಹೊರಬಿಡಲಾಗುತ್ತಿತ್ತು. ಬೆಳಿಗ್ಗೆ 78,497 ಕ್ಯೂಸೆಕ್ ಇದ್ದ ಒಳಹರಿವು ಸಂಜೆಯ ವೇಳೆಗೆ



69,084 ಕ್ಯೂಸೆಕ್‌ಗೆ ಇಳಿಕೆಯಾಗಿದೆ. ಜಲಾಶಯದಲ್ಲಿ 92 ಟಿಎಂಸಿ ಅಡಿ (ಸಂಗ್ರಹ ಸಾಮರ್ಥ್ಯದ ಶೇ 74 ರಷ್ಟು) ನೀರು ಸಂಗ್ರಹವಾಗಿದೆ.

# ಸಿಎ ಪರೀಕ್ಷೆಯಲ್ಲಿ ಪ್ರಭು ಘಟ್ಟೆಪ್ಪನವರ ಸಾಧನೆ



**ಮಹಾಲಿಂಗಪುರ :** ಸ್ಥಳೀಯ ಜೇಸಿ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಸದಸ್ಯ ದಿವಂಗತ ಗೊಡಚೆಪ್ಪ ಮ. ಘಟ್ಟೆಪ್ಪನವರ ಅವರ ಪುತ್ರ ಪ್ರಭು ಘಟ್ಟೆಪ್ಪನವರ ಬೆಂಗಳೂರಿನ ಹಿರಿಯ ಸಿ. ಎ. ಸಂತೋಷ ಕೆ. ಇವರ ಮಾರ್ಗದರ್ಶನದಲ್ಲಿ ಚಾರ್ಟರ್ಡ ಅಕೌಂಟೆಂಟ್ (ಸಿ.ಎ.) ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪಟ್ಟಣಕ್ಕೆ ಹಾಗೂ ಕಲಿತ ಸಂಸ್ಥೆಗೆ ಕೀರ್ತಿ ತಂದ ಪ್ರಯುಕ್ತ ಜೇಸಿ ಶಾಲೆಯ ನವಚೇತನ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪದಾಧಿಕಾರಿಗಳು ಹಾಗೂ ಸಮಾಜದ ಮುಖಂಡರು ಅಭಿನಂದಿಸಿದ್ದಾರೆ.

# ಶತಮಾನದ ಕಂಡ ಶಾಲೆಯ ಮಕ್ಕಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ



**ಮಹಾಲಿಂಗಪುರ :** ಶತಮಾನ ಕಂಡ ಪಟ್ಟಣದ ಡಬಲ್ ರಸ್ತೆಯ ಸರ್ಕಾರಿ ಕನ್ನಡ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲಾ ಮಕ್ಕಳಿಗೆ ಬೆಂಗಳೂರಿನ ಅವಿರತ ಪೌಂಡೇಶನ್ನಿನ ಸಂಸ್ಥಾಪಕ ಅಶ್ವಥ್ ಅವರು ನೋಟ್ಬುಕ್ಕಗಳನ್ನು ಉಚಿತವಾಗಿ ವಿತರಿಸಿದರು.

ಶಾಲೆಯಲ್ಲಿ ಇತ್ತೀಚೆಗೆ ಜರುಗಿದ ದಾನಿಗಳ ಸನ್ಮಾನ ಮತ್ತು ಕಲಿಕಾ ಸಾಮಗ್ರಿಗಳ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಕ್ಕಳಿಗೆ ನೋಟ್ಬುಕ್ಗಳನ್ನು ವಿತರಿಸಿದರು. ಶಾಲೆಗೆ ಲ್ಯಾಪ್ಟಾಪ್ ಮತ್ತು ಪ್ರಿಂಟರ್ ದೇಣಿಗೆ ನೀಡಿದ ದಾನಿಗಳಾದ ನಾಗರಾಳ ಗ್ರಾಮದ ಶ್ರೀಮತಿ ರುಕ್ಮವ್ವ ಸಿ. ಪಾಟೀಲ, ಕೃಷ್ಣಗೌಡ ಹ. ಪಾಟೀಲ, ಕಾಂತಿಲಾಲ್ ಕೊಠಾರಿ (ರೀಟಾ ಸಾರೀ ಸೆಂಟರ್) ಶಶಿಕುಮಾರ್ ಎನ್. ಬುರುಡ (ಇಂಜಿನಿಯರ್) ಹಾಗೂ ನೋಟ್ಬುಕ್ ವಿತರಿಸಿದ ಅಶ್ವತ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಶಾಲೆಯ ಮುಖ್ಯ ಗುರುಗಳಾದ ಎಂ. ಎಸ್. ಪಾಟೀಲ ಮಾತನಾಡಿ ನಮ್ಮ ಸರ್ಕಾರಿ ಶಾಲೆಗೆ ಲ್ಯಾಪ್ಟಾಪ್ ಮತ್ತು ಪ್ರಿಂಟರ್ ದೇಣಿಗೆ ನೀಡಿದ್ದಲ್ಲದೆ ಎಲ್ಲಾ ಮಕ್ಕಳಿಗೆ ನೋಟ್ಬುಕ್ಕಗಳನ್ನು ಉಚಿತವಾಗಿ ವಿತರಿಸಿದ ಸರ್ವ ದಾನಿಗಳ ಸಹಕಾರವನ್ನು ಸ್ಮರಿಸಿದರು.

ಎಸ್ಡಿಎಂಸಿ ಅಧ್ಯಕ್ಷ ಉಸ್ಮಾನ ಪೆಂಡಾರಿ, ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಈರಣ್ಣ ಹಲಗತ್ತಿ, ವೀರೇಶ ಆಸಂಗಿ, ಶಾಲೆಯ ಶಿಕ್ಷಕರಾದ ಎಂ. ಆರ್. ಚಿತ್ರಗಾರ, ಶ್ರೀಮತಿ ವೈ. ವೈ. ತಂಬೂರಿ, ಲತಾ ಪೂಜಾರಿ, ಶ್ರೀಮತಿ ಜಿ. ವಾಯ್. ಭಜಂತ್ರಿ, ಶ್ರೀಮತಿ ಎಸ್. ಐ. ಗದಗ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

# ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ




**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಗೋಪಾಲ ಜಾಧವ ಹಾಗೂ ಗ್ರಾಮ ಪಂಚಾಯತ್ ಸದಸ್ಯರಾದ ಮಹೇಶ ಬಾಗಲಿಯವರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 220 ಮಕ್ಕಳಿಗೆ ಕಂಪಾಸ್ ಬಾಕ್ಸ್ ಮತ್ತು ಪೆನ್ಸಿಲ್ ಸೇರಿದಂತೆ ಕಲಿಕಾ ಸಾಮಗ್ರಿಗಳ ಕಿಟ್ಗಳನ್ನು ಉಚಿತವಾಗಿ ದೇಣಿಗೆ ನೀಡಿದರು.

ಶಾಲೆಯ ಮುಖ್ಯಗುರು ಎಸ್. ಎನ್. ಬ್ಯಾಳಿ ದಾನಿಗಳು ನೀಡಿದ ಕಲಿಕಾ ಸಾಮಗ್ರಿಗಳ ವಿತರಣೆಯಿಂದಾಗಿ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳ ಹಾಜರಾತಿ, ಕಲಿಕಾ ಗುಣಮಟ್ಟದ ಸುಧಾರಣೆಯ ಜೊತೆಗೆ, ಸರಕಾರಿ ಶಾಲೆಗಳು ಅಭಿವೃದ್ಧಿಯಾಗಲು ಸಹಕಾರಿಯಾಗುತ್ತದೆ ಎಂದರು. ದೇಣಿಗೆ ನೀಡಿದ ಮಹನೀಯರನ್ನು ಶಾಲೆಯ ವತಿಯಿಂದ ಕೃತಜ್ಞತಾ ಪೂರ್ವಕವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಎಸ್ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಹಾಜರಿದ್ದರು.

# ಇ-ಖಾತೆಗಾಗಿ ಪುರಸಭೆಯಿಂದ ಅಭಿಯಾನ: ಸಾರ್ವಜನಿಕರ ನಿರಾಸಕ್ತಿ, ಕುರ್ಚಿಗಳು ಖಾಲಿ ಖಾಲಿ!

**ತೇರದಾಳ :** ಇ-ಆಸ್ತಿ ಖಾತೆ ಕುರಿತು ಸ್ಥಳೀಯ ಪುರಸಭೆಯವರು ಭಾನುವಾರ ಜುಲೈ 13 ರಂದು ನಡೆಸಿದ ಅಭಿಯಾನಕ್ಕೆ ಸಾರ್ವಜನಿಕರು ನಿರಾಸಕ್ತಿ ವಹಿಸಿದ ಪರಿಣಾಮ ಅಲ್ಲಿ ಹಾಕಿದ್ದ ಕುರ್ಚಿಗಳು ಖಾಲಿ ಖಾಲಿ ಇದ್ದಿದ್ದು ಕಂಡು ಬಂದಿತು.

ಇ-ಖಾತೆಗಾಗಿ ರಾಜ್ಯ ಸರಕಾರ ಸಾಕಷ್ಟು ಸೂಚನೆ, ಪ್ರಚಾರ ನೀಡುತ್ತಿದೆ. ಆದರೆ ನೂರೆಂಟು ದಾಖಲೆ,ಷರತ್ತುನಿಗದಿಗೊಳಿಸಿದ್ದರಿಂದ ದಾಖಲೆಗಳು ಇಲ್ಲದ ಸಾರ್ವಜನಿಕರು ಇ-ಖಾತೆ ಕುರಿತು ನಿರಾಸಕ್ತಿ ವಹಿಸುತ್ತಿದ್ದಾರೆ. ಅನೇಕ ತಲೆಮಾರಿನಿಂದ ಬಂದಿರುವ ಆಸ್ತಿಗಳ ಮೂಲ ದಾಖಲೆಗಳನ್ನು ಕೇಳಿದರೆ ಎಲ್ಲಿಂದ




ತರುವುದು ಎಂದು ನಾಗರಿಕರು ಪ್ರಶ್ನಿಸುತ್ತಿದ್ದಾರೆ. ಮೊದಲು ಬಾಂಡ್ ಮೂಲಕ ಹಾಗೂ ಹಕ್ಕು ಬಿಟ್ಟ ಪತ್ರದ ಮೂಲಕ ಆಸ್ತಿಗಳನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಈಗ ಅವುಗಳು ನಡೆಯುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಇ-ಖಾತೆ ಆಸ್ತಿ ಹೇಗೆ ಮಾಡಿಕೊಳ್ಳುವುದು. ಪುರಸಭೆಗೆ ಅಲೆದಾಡಿ

**ತೇರದಾಳ ಪುರಸಭೆ ವ್ಯಾಪ್ತಿಯಲ್ಲಿ ದಾಖಲೆಗಳ ಪ್ರಕಾರ ಆರು ಸಾವಿರಕ್ಕೂ ಅಧಿಕ ಆಸ್ತಿಗಳಿವೆ. ಇ-ಖಾತೆ ಕೇವಲ ಏಳನೂರರಷ್ಟು ಮಾತ್ರ ಆಗಿವೆ. ದಾಖಲೆಗಳ ಸಮಸ್ಯೆ ಒಂದೆಡೆ ಆಗಿದೆ. ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ದಾಖಲೆಗಳು ಸರಿ ಇದ್ದವರು ಕೂಡ ಇ-ಖಾತೆ ಆಸ್ತಿ ಮಾಡಿಕೊಳ್ಳಲು ಮುಂದೆ ಬರುತ್ತಿಲ್ಲ.**

**। ಎಫ್. ಬಿ. ಗಿಡ್ಡಿ.**
**ಪುರಸಭೆ ಮುಖ್ಯಾಧಿಕಾರಿ.**

ಸಾಕಾಗಿದೆ. ಈಗ ಓಣಿಯಲ್ಲಿಯೇ ಬಂದಿದ್ದಾರೆ. ಆದರೆ ಏನು ಪ್ರಯೋಜನ ಎಂದು ಹಲವು ಜನ ತಮ್ಮ ಸಮಸ್ಯೆ ತೋಡಿಕೊಂಡರು.

ಇನ್ನು ಈ ಕುರಿತು ಪುರಸಭೆ ಅಧಿಕಾರಿಗಳನ್ನು ವಿಚಾರಿಸಿದರೆ, ಸಾರ್ವಜನಿಕರ ಸಮಸ್ಯೆಗಳ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ.

ಜತೆಗೆ ಪೌರಾಡಳಿತ ಇಲಾಖೆಗೂ ಪತ್ರ ಬರೆಯಲಾಗಿದೆ. ಸರಕಾರದ ಮಾರ್ಗಸೂಚಿ ಹೇಗೆ ಹೇಳುತ್ತದೆಯೋ ಹಾಗೆ ನಾವು ಕೆಲಸ ಮಾಡಬೇಕು ಅಷ್ಟೇ ಎಂದು ಅಧಿಕಾರಿಗಳು ತಮ್ಮ ಅಸಹಾಯಕತೆ ಹೇಳಿದರು. ಅಭಿಯಾನದಲ್ಲಿ ಕೇವಲ ಬೆರಣಿಕೆಯಷ್ಟು ಜನ ಇ-ಖಾತೆ ಆಸ್ತಿ ಉತಾರ ಪಡೆದುಕೊಂಡರು. ಪುರಸಭೆ ಅಧ್ಯಕ್ಷೆ, ಉಪಾಧ್ಯಕ್ಷೆ ಸದಸ್ಯರು ಅಧಿಕಾರಿಗಳು ಹಾಜರಿದ್ದರು.

# ಖ್ಯಾತ ಹಿರಿಯ ನಟಿ, ಅಭಿನಯ ಸರಸ್ವತಿ ಬಿ. ಸರೋಜಾದೇವಿ

ಬಿ. ಸರೋಜಾದೇವಿ ಎಂದರೆ ನನಗೆ ನೆನಪಾಗುವುದು ಮೊದಲ ಕನ್ನಡ ವರ್ಣ ಚಿತ್ರ ಅಮರಶಿಲ್ಪಿ ಜಕಣಾಚಾರಿ. ನಮ್ಮೂರಿನ ಟೆಂಟಿನಲ್ಲಿ ಈ ಚಿತ್ರ ನೋಡಿದಾಗ ಅದ್ಭುತ ಅನ್ನಿಸಿತ್ತು. ನಾನು ಕೂಡ ಭರತನಾಟ್ಯ ಕಲಿಯಬೇಕು ಅಂತ ಆಸೆ ಮೂಡಿಸಿದ್ದು ಈ ಚಿತ್ರ, ಅದರ ಹಾಡುಗಳು. ಆದರೆ ನಮ್ಮ ಹಳ್ಳಿಯಲ್ಲಿ ಸಂಗೀತ, ನೃತ್ಯ ಯಾವುದಕ್ಕೂ ಗುರುಗಳಿರಲಿಲ್ಲ.

ಕಿತ್ತೂರು ಚೆನ್ನಮ್ಮ ಚಿತ್ರ ನೋಡಿದಾಗ ಸರೋಜಾದೇವಿ ವೀಣೆ ಹಿಡಿದು ಕುಳಿತು 'ತನುಕರಗದವರಲ್ಲಿಪುಷ್ಪವನೊಲ್ಲೆಯಯ್ಯ' ಎಂದು ಅಕ್ಕಮಹಾದೇವಿಯ ವಚನ ಹಾಡಿದ್ದು ಮನಸ್ಸಿನಲ್ಲಿ ಕುಳಿತಿತು. 'ನಿನಗೇಕೆ ಕೊಡಬೇಕು ಕಪ್ಪ?' ಇತ್ಯಾದಿ ಅರಚುವ ಸಂಭಾಷಣೆ ನನಗೆ ಪ್ರಿಯವಾಗಿರಲಿಲ್ಲ. ಮೂವತ್ತೇಳು ವರ್ಷ ವೃತ್ತಿಯಲ್ಲಿ ಏಕಪಾತ್ರಾಭಿನಯದಲ್ಲಿ ಈ ಸಂಭಾಷಣೆ ಕೇಳಿ ಕೇಳಿ ತಲೆ ಚಿಟ್ಟು ಹಿಡಿದಿತ್ತು ! ಮುಂದೆ ನನಗೆಒಂದಿಷ್ಟುಕಾಲನೃತ್ಯ,ವೀಣೆಎರಡನ್ನು ಕಲಿಯುವ ಸುಯೋಗ ಒದಗಿತು.

'ಮಲ್ಲಮ್ಮನ ಪವಾಡ' ವನ್ನು ಟೆಂಟಿನಲ್ಲಿ ನೋಡಿದಾಗ ಊರಿನವರೆಲ್ಲ ಮಲ್ಲಮ್ಮನ ಪಕೋಡ ಅಂತಿದ್ದರು. ಕಾರಣ ನಮ್ಮೂರಲ್ಲಿ ಮಲ್ಲಮ್ಮ ಎನ್ನುವವಳು ಪಕೋಡದ ಅಂಗಡಿಯನ್ನು ಇಟ್ಟಿದ್ದಳು. ಅದರಲ್ಲಿ ಬರುವ 'ಶರಣೆಂಬೆ ನಾ ಶಶಿಭೂಷಣ'



ಹಾಡು ಪ್ರಿಯವಾಯಿತು.

ನಾನು ನೃತ್ಯದ ತರಗತಿಗೆ ಭರತ ಕಲಾಮಣಿ ರಾಧಾಕೃಷ್ಣ ಅವರ ಬಳಿ ಸೇರಿದಾಗ ಬಿ. ಸರೋಜಾದೇವಿ ಅವರ ಬಗ್ಗೆ ಬಹಳಷ್ಟು ಮಾತು ಕೇಳಿ ಬರುತ್ತಿತ್ತು. ಸರೋಜಾದೇವಿ ನೃತ್ಯ ಕಲಿತಿದ್ದೇ ನಮ್ಮ ಮೇಷ್ಟ್ರ ಬಳಿಯಲ್ಲಿ. ಕನ್ನಡದಲ್ಲಿ ಸರೋಜಾದೇವಿ ನಟಿಸಿದ್ದು ಕಮ್ಮಿ. ತಮಿಳಿನಲ್ಲಿಯೇ ಆಕೆ ಹೆಚ್ಚು ಪ್ರಸಿದ್ಧಿ ಪಡೆದದ್ದು. ಆಕೆ ಒಳ್ಳೆಯ ಕಲಾವಿದೆಯಾಗಿದ್ದರೂ ಯಾಕೋ ಜಯಂತಿಯ ಹಾಗೆ ಮನಸ್ಸಿಗೆ ಹತ್ತಿರವಾಗಲಿಲ್ಲ. ಆಕೆಯ ಬಗ್ಗೆ ಒಂದು ಸಹಜ ಕುತೂಹಲ ಮಾತ್ರ ಇತ್ತು. ನಾನು ಎಂ ಇ ಎಸ್ ಕಾಲೇಜಿಗೆ ಹೋಗಬೇಕಾದರೆ ಮಲ್ಲೇಶ್ವರದ ಹನ್ನೊಂದನೆಯ ಕ್ರಾಸ್ ನಲ್ಲಿದ್ದ ಅವರ ಮನೆಯ ಮುಂದೆಯೇ ಹೋಗಬೇಕಾಗಿತ್ತು. ಪ್ರತಿದಿನ ನಾವು ಗೆಳತಿಯರು ಇಣುಕಿ ನೋಡುತ್ತಿದ್ದರೂ ನಮಗೆ ದರ್ಶನ ಭಾಗ್ಯ ಸಿಕ್ಕಿರಲಿಲ್ಲ!

ನನ್ನ ಗಂಡನ ಅಜ್ಜನ ಮನೆ ಸರೋಜಾದೇವಿ ಅವರ ಪಕ್ಕದ ಮನೆಯೇ. ಅವರೆಲ್ಲ ಫೋನ್ ಮಾಡಲು ಅಲ್ಲಿಗೆ ಹೋಗುತ್ತಿದ್ದರಂತೆ. 'ಸಂಕೋಚ ಮಾಡ್ಕೋಬೇಡಿ,ಬನ್ನಿ' ಎಂದು ಬಹಳಪ್ರೀತಿಯಿಂದಮಾತನಾಡಿಸುತ್ತಿದ್ದರು, ನೋಡಲು ಬಹು ಲಕ್ಷಣವಾಗಿದ್ದರು ಅಂತ ನೆನಪಿಸಿಕೊಳ್ಳುತ್ತಾರೆ.

ಒಮ್ಮೆ ಸರೋಜಾದೇವಿ ಅವರನ್ನು ನೋಡುವ ಪ್ರಸಂಗ ಬಂತು. ನಮ್ಮ ನೃತ್ಯ ಶಾಲೆಯ ವಾರ್ಷಿಕೋತ್ಸವಕ್ಕೆ ಮೇಷ್ಟ್ರು ಅವರನ್ನು ಕರೆದಿದ್ದರು. ಅಷ್ಟು ಹೊತ್ತಿಗೆ ಅವರು ತಮಿಳು ಚಿತ್ರರಂಗವನ್ನು ತೊರೆದು ಬೆಂಗಳೂರಿನಲ್ಲಿ ನೆಲೆಸಿದ್ದರು. ಕಾರ್ಯಕ್ರಮಆರಂಭವಾಗಬೇಕು..ನಾವೆಲ್ಲ ಹುರುಪಿನಿಂದ ಗುರುನಾನಕ್ ಭವನದಲ್ಲಿ ಓಡಾಡುತ್ತಿದ್ದೆವು. ಮೇಷ್ಟ್ರು ಲೈಟಿಂಗ್ ನವರಿಗೆ ಸಲಹೆ ಕೊಡುತ್ತ ವೇದಿಕೆಯ ಹಿಂದೆ ಬರುತ್ತಿದ್ದವರೇ ನಾಲ್ಕೈದು ಅಡಿಯಿಂದ ಬಿದ್ದುಬಿಟ್ಟರು. ಎಲ್ಲರಿಗೂ ಆತಂಕ, ಭಯ.. ತಕ್ಷಣವೇ ಮೇಷ್ಟ್ರನ್ನು ಆಸ್ಪತ್ರೆಗೆ ಸೇರಿಸಿದರು. ಮೇಡಂ ಈ ಪ್ರಸಂಗವನ್ನು ನಿರ್ವಹಿಸಿದ ರೀತಿ ಅದ್ಭುತ. ಕಾರ್ಯಕ್ರಮ ಶುರುವಾಗುವ ಸಮಯ. ನಟ್ಟುವಾಂಗವನ್ನು ಮೇಷ್ಟ್ರು ನಿರ್ವಹಿಸಬೇಕಿತ್ತು.

ಮಕ್ಕಳನ್ನು ಮೇಡಂ ಆಸ್ಪತ್ರೆಗೆ ಕಳಿಸಿ, ಆ ಒತ್ತಡದ ಸಮಯದಲ್ಲಿಯೂ ಏನೂ ಆಗದವರಂತೆ ಕುಳಿತು ನಟ್ಟುವಾಂಗ ಮಾಡಿದರು. ನಮಗೆ ಮಾತ್ರ ಅವರ ನೋವು ಅರ್ಥವಾಗುತ್ತಿತ್ತು. ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದ ಸರೋಜಾದೇವಿ ಅವರಿಗೂ ವಿಷಯ ತಿಳಿದು ಹೆಚ್ಚು ಮಾತನಾಡಲಾಗಲಿಲ್ಲ. ನಂತರ ನಾವೆಲ್ಲ ಆಸ್ಪತ್ರೆಗೆ ಓಡಿದಾಗ ಸರೋಜಾದೇವಿ ಗುರುಗಳ ಪಕ್ಕ ನಿಂತು ಅವರ ಆರೋಗ್ಯ ವಿಚಾರಿಸುತ್ತಿದ್ದರು. ಆಗವರನ್ನು ನೋಡಿದೆ. ಅದು ಮಾತನಾಡುವ ಸಮಯವೂ ಆಗಿರಲಿಲ್ಲ. ಸದ್ಯ, ಮೇಷ್ಟ್ರು ಬೇಗನೆ ಸುಧಾರಿಸಿಕೊಂಡರು. ಅವರ ಮನೆಯಲ್ಲಿದ್ದ ಪೇಪರ್ ಕಟಿಂಗ್ ನಲ್ಲಿ ಸರೋಜಾದೇವಿ ನೃತ್ಯ ಮಾಡಿದ್ದ ಚಿತ್ರ, ವಿವರಗಳನ್ನು ನೋಡುತ್ತಿದ್ದೆ. ಗೆಳತಿ ಪ್ರತಿಭಾ ಸುಧಾದಲ್ಲಿ ಅವರ ಬಗ್ಗೆ ಬರೆಯುತ್ತಿದ್ದರು. ಆಸಕ್ತಿಯಿಂದ ಓದುತ್ತಿದ್ದೆ. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಅವರು ಮಾಡಿದ ಚಿತ್ರಗಳನ್ನು ಅಷ್ಟು ನೋಡಲಿಲ್ಲ. ಸಾಹಿತ್ಯದಲ್ಲೂ ಅವರಿಗೆ ಬಹಳ ಆಸಕ್ತಿಯಿತ್ತು. ಪ್ರತಿ ವರ್ಷ ಅವರ ಹೆಸರಿನಲ್ಲಿ ಪ್ರಶಸ್ತಿ ಕೊಡುತ್ತಾರೆ.

ಸರೋಜಾದೇವಿ ಅವರ ಚಿತ್ರದ ನೆನಪುಗಳು ನನಗಿಷ್ಟೇ.

– ಎಂ. ರಾಮಸ್ವಾಮಿ.

# ಖಾಸಗಿಯವರ ಅಡ್ಡೆಯಾದ ಬಸ್ ನಿಲ್ದಾಣ




**ಕನಕಗಿರಿ :** ತಾಲ್ಲೂಕಿನ ಹೋಬಳಿ ಕೇಂದ್ರವಾಗಿರುವ ನವಲಿ ಗ್ರಾಮದ ಬಸ್ ನಿಲ್ದಾಣಕ್ಕೆ ಈವರೆಗೂ ಉದ್ಘಾಟನೆ ಭಾಗ್ಯ ಸಿಕ್ಕಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಖಾಸಗಿ ವಾಹನಗಳ ತಂಗುದಾಣವಾಗಿದೆ. ಮೂಲಸೌಲಭ್ಯಗಳಿಲ್ಲದೆ ಬಸ್ ನಿಲ್ದಾಣ ಸೊರಗಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಹೀಗಾಗಿ ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಕ್ರಮಕೈಗೊಳ್ಳಬೇಕಿದೆ.

ನವಲಿ ಬಸ್ ನಿಲ್ದಾಣದಿಂದ ಕಾರಟಗಿ, ಗಂಗಾವತಿ, ಕುಷ್ಟಗಿ, ಕೊಪ್ಪಳ, ತಾವರಗೇರಾ ಪಟ್ಟಣಗಳಿಗೆ ನಿತ್ಯ ಬಸ್‌ಗಳು ಸಂಚರಿಸುತ್ತವೆ. ನಿರ್ವಹಣೆಯಿಲ್ಲದ ಕಾರಣ ಯಾವ ಬಸ್‌ಗಳೂ ಸಹ ನಿಲ್ದಾಣದಲ್ಲಿ ನಿಲುಗಡೆ ಆಗುತ್ತಿಲ್ಲ. ಕನಕಗಿರಿ–ಗಂಗಾವತಿಯ ರಸ್ತೆಯಲ್ಲಿ ಬಸ್ ನಿಲ್ಲಿಸಲಾಗುತ್ತಿದ್ದು, ಪ್ರಯಾಣಿಕರು ಮಳೆ, ಬೇಸಿಗೆಯಲ್ಲಿ ಸಮಸ್ಯೆ ಎದುರಿಸುವಂತಾಗಿದೆ.

ಉದ್ಘಾಟನೆ ಭಾಗ್ಯ ಇಲ್ಲ: ಐದು ವರ್ಷಗಳ ಹಿಂದೆ ಮಾಜಿ ಶಾಸಕ ಬಸವರಾಜ ದಢೇಸೂಗೂರು ಅವರು ಬಸ್ ನಿಲ್ದಾಣದ ಕಾಮಗಾರಿಗೆ 60 ಲಕ್ಷ ಅನುದಾನ ಮಂಜೂರು ಮಾಡಿಸಿ, ಕಾಮಗಾರಿ ಪೂರ್ಣಗೊಳಿಸಿದ್ದರು. ಆದರೆ ಅನುದಾನದ ಕೊರತೆಯಿಂದಾಗಿ ನಿಲ್ದಾಣದ ಕಾಮಗಾರಿ ಅರೆಬರೆಯಾಗಿತ್ತು.

ಸದ್ಯ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಆಸನಗಳ ವ್ಯವಸ್ಥೆ, ಎರಡು ಚಿಕ್ಕ ಮಳಿಗೆ, ಸಾರಿಗೆ ನಿಯಂತ್ರಕರ ಕೊಠಡಿ ನಿರ್ಮಾಣವಾಗಿದೆ. ಆದರೆ ಮೂಲಸೌಲಭ್ಯಗಳು ಸೇರಿದಂತೆ ಇತರೆ ಕೆಲಸಗಳು ಸಾಕಷ್ಟು ಉಳಿದುಕೊಂಡಿವೆ. ಜತೆಗೆ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಬಸ್‌ನಿಲ್ದಾಣ ಅವ್ಯವಸ್ಥೆಯ ಆಗರವಾಗಿದೆ. ಅನುದಾನಕ್ಕೆ ತಕ್ಕಂತೆ ಕಾಮಗಾರಿ ಮಾಡಲಾಗಿದೆ. ಇನ್ನಷ್ಟು ಸೌಲಭ್ಯ ಒದಗಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಜನಪ್ರತಿನಿಧಿಗಳು ಬಸ್ ನಿಲ್ದಾಣಕ್ಕೆ ಉದ್ಘಾಟನೆ ಭಾಗ್ಯ ನೀಡಿಲ್ಲ. ಹೀಗಾಗಿ ಜನರು ಮೂಲ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ಮಲ್ಲಪ್ಪ, ನಾಗಪ್ಪ ದೂರುತ್ತಾರೆ.


ಬಸ್ ನಿಲ್ದಾಣದ ಜಾಗದಲ್ಲಿ ಕಿಡಿಗೇಡಿಗಳು ಕಿಡಕಿಗೆ ಅಳವಡಿಸಿದ ಗ್ಲಾಸ್ ಗಳನ್ನು ಒಡೆದಿದ್ದಾರೆ. ಸಚಿವರಾದ ಶಿವರಾಜ ತಂಗಡಗಿ ಅವರು ಆದಷ್ಟು ಬೇಗ ಅನುದಾನ ಬಿಡುಗಡೆಗೊಳಿಸಿ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸಾರಿಗೆ ವಾಹನಗಳ ತಂಗುದಾಣ: ಈ ಬಸ್ ನಿಲ್ದಾಣವು ಖಾಸಗಿ ವಾಹನಗಳಿಗೆ ತಂಗುದಾಣವಾಗಿದೆ. ಖಾಸಗಿ ವಾಹನಗಳ ಮಾಲೀಕರು, ನಿಲ್ದಾಣದಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸಿ ವಿಶ್ರಾಂತಿ ಪಡೆಯುತ್ತಾರೆ.

ಆರಂಭದಲ್ಲಿ ಸಾರಿಗೆ ನಿಯಂತ್ರಕರೊಬ್ಬರನ್ನು ನೇಮಕ ಮಾಡಲಾಗಿತ್ತು. ಸಾರಿಗೆ ನಿಗಮದವರು ಅವರನ್ನು ಹಿಂದಕ್ಕೆ ಪಡೆದಿದ್ದರಿಂದ ಬಸ್ ನಿಲ್ದಾಣವು ಖಾಸಗಿ ವಾಹನಗಳ ತಂಗುದಾಣವಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಗುಟ್ಕಾ ತಿಂದು ಉಗುಳುವುದು, ಮದ್ಯಸೇವಿಸಿ, ಖಾಲಿ ಬಾಟಲಿ ಬಿಸಾಕಿ ರುವುದು, ಬೀಡಿ, ಸಿಗರೇಟ್ ಪ್ಯಾಕೆಟ್, ಪ್ಲಾಸ್ಟಿಕ್ ತ್ಯಾಜ್ಯಗಳು ಎಲ್ಲೆಂದರಲ್ಲಿ ಬಿದ್ದಿವೆ. ಪ್ರಯಾಣಿಕರ ಅನುಕೂಲಕ್ಕೆ ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ವ್ಯವಸ್ಥೆ, ವಿದ್ಯುತ್ ಸಂಪರ್ಕ ಇಲ್ಲವಾಗಿದೆ. ಬೆಳಕಿನ ವ್ಯವಸ್ಥೆಯಿಲ್ಲದ ಹಿನ್ನೆಲೆಯಲ್ಲಿ ರಾತ್ರಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಬಸ್ ನಿಲ್ದಾಣದ ರಸ್ತೆಯನ್ನು ಡಾಂಬರೀಕರಣಗೊಳಿಸಿಲ್ಲ. ಮಳೆ ಬಂದರೆ ನೀರು ಸಂಗ್ರಹಗೊಳ್ಳುತ್ತದೆ. ಶೌಚಾಲಯ ಗಬ್ಬೆದ್ದು ನಾರುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ ಎಂದು ಸಮೀಪದ ನಿವಾಸಿಗಳು ದೂರಿದ್ದಾರೆ

# ಅನಧಿಕೃತ ರೆಸಾರ್ಟ್ ತೆರವಿಗೆ ದಿನಾಂಕ ನಿಗದಿ



**ಗಂಗಾವತಿ :** ತಾಲ್ಲೂಕಿನ ಆನೆಗೊಂದಿ, ಹನುಮನಹಳ್ಳಿ, ಸಾಣಾಪುರ ಭಾಗದ ಕಂದಾಯ ಭೂಮಿಗಳಲ್ಲಿ ತಲೆಯೆತ್ತಿರುವ ಅನಧಿಕೃತ ರೆಸಾರ್ಟ್‌ಗಳ ತೆರವಿಗೆ ಹಂಪಿ ಅಭಿವೃದ್ಧಿ ಪ್ರಾಧಿಕಾರವು ಜುಲೈ 16ರಂದು ಮುಹೂರ್ತ ನಿಗದಿಪಡಿಸಿದೆ. ಆದರೆ ರೆಸಾರ್ಟ್‌ಗಳ ಮಾಲೀಕರು ಜನಪ್ರತಿನಿಧಿಗಳನ್ನು ಭೇಟಿ ಮಾಡಿ, ತೆರವಿಗೆ ಮುಂದಾಗದಂತೆ ಅಧಿಕಾರಿಗಳಿಗೆ ಒತ್ತಡ ಹೇರಲಾಗುತ್ತಿದೆ.

ಸಾಣಾಪುರ, ಆನೆಗೊಂದಿ ಭಾಗದಲ್ಲಿ 5 ವರ್ಷಗಳಿಂದ ಕಂದಾಯ, ಸರ್ಕಾರಿ, ಅರಣ್ಯ, ನದಿಪಾತ್ರಗಳಲ್ಲಿ ಅನಧಿಕೃತ ರೆಸಾರ್ಟ್‌ಗಳು ತಲೆಯೆತ್ತಿವೆ. ರೆಸಾರ್ಟ್ ಮಾಲೀಕರು ನೆಪಕ್ಕೆ ಪ್ರವಾಸೋದ್ಯಮ ಅಭಿವೃದ್ಧಿ ಎನ್ನುತ್ತಿದ್ದೂ, ಇಲ್ಲಿ ನಡೆಸೋದೆಲ್ಲ ಮೋಜು–ಮಸ್ತಿ, ನಶೆ ಬರಿಸುವ ವಸ್ತುಗಳ ಸೇವನೆಯ ಚಟುವಟಿಕೆಗಳು ನಡೆದಿವೆ.

ಸಾಣಾಪುರ, ಆನೆಗೊಂದಿ ಭಾಗದಲ್ಲಿ 5 ವರ್ಷಗಳಲ್ಲಿ ಹಲವು ಬಾರಿ ಅನಧಿಕೃತ ರೆಸಾರ್ಟ್‌ಗಳನ್ನು ತೆರವುಗೊಳಿಸಿ, ಮತ್ತೆ ನಿರ್ಮಿಸದಂತೆ ಸೂಚಿಸಲಾಗಿದೆ. ಆದರೂ ರಾಜಕಾರಣಿಗಳ ಪ್ರಭಾವ ಬಳಸಿ, ಅಧಿಕಾರಿಗಳಿಗೆ ಲಂಚ ನೀಡಿ ಮತ್ತೆ, ಮತ್ತೆ ಅನಧಿಕೃತ ರೆಸಾರ್ಟ್ ನಿರ್ಮಿಸಿಕೊಂಡು, ಮಾಲೀಕರು ವ್ಯವಹಾರ ನಡೆಸುತ್ತಿದ್ದಾರೆ.

ವಾರಾಂತ್ಯ, ತಿಂಗಳಾಂತ್ಯ, ಹಬ್ಬ–ಹರಿದಿನ, ಹೊಸವರ್ಷ, ಜನ್ಮದಿನ ಎಂದು ವಿವಿಧ ದಿನಗಳಂದು ಇವೆಂಟ್ ರಚಿಸಿಕೊಂಡು, ರಾತ್ರಿಯೆಲ್ಲ ಪ್ರವಾಸಿಗರನ್ನು ಮದ್ಯದ ನಶೆಯಲ್ಲಿ ತೇಲುವಂತೆ ಮಾಡಿ, ರೆಸಾರ್ಟ್ ಮಾಲೀಕರು ಲಕ್ಷಾಂತರ ಹಣ ಸಂಪಾದಿಸುತ್ತಿದ್ದಾರೆ. ಇದಕ್ಕೆ ಜಿಲ್ಲಾಡಳಿತ, ಜೆಸ್ಕಾಂ, ತಾಲ್ಲೂಕು ಆಡಳಿತ ಅಧಿಕಾರಿಗಳು ಬೆಂಬಲ ನೀಡುತ್ತಿದ್ದು, ಗಾಂಜಾ, ಅತ್ಯಾಚಾರ ಪ್ರಕರಣಗಳು ನಡೆಯುತ್ತಲೇ ಇವೆ.

ಘಟನೆಗಳು ಗಂಭೀರವಾದಾಗ ಮಾತ್ರ ಪೊಲೀಸ್ ಇಲಾಖೆ, ತಾಲ್ಲೂಕು ಆಡಳಿತ ನೆಪಕ್ಕೆ ರೆಸಾರ್ಟ್‌ಗಳನ್ನು ಪರಿಶೀಲಿಸಿ, ವರದಿ ಮಾಡಿಕೊಂಡು ಎಚ್ಚರಿಕೆ ನೀಡುತ್ತಿದೆಯೇ ಹೊರತು, ಅಕ್ರಮಗಳ ಶಾಶ್ವತ ಕಡಿವಾಣಕ್ಕೆ ಈವರೆಗೆ ಸೂಕ್ತ ಕ್ರಮಕೈಗೊಳ್ಳುತ್ತಿಲ್ಲ. ಹೀಗಾಗಿ ಸಾಣಾಪುರ, ಆನೆಗೊಂದಿ ಭಾಗದಲ್ಲಿ ಅನೈತಿಕ ಚಟುವಟಿಕೆಗಳ ಪ್ರಕರಣಗಳು ಮರುಕಳಿಸುತ್ತಲೇ ಇವೆ.

ಈ ಬಾರಿಯಾದರೂ ತೆರವಾಗುವವೇ: 2023 ರಿಂದ 2024ರವರೆಗೆ ಅನಧಿಕೃತ ರೆಸಾರ್ಟ್‌ಗಳ ತೆರವಿಗೆ ಹಲವು ಬಾರಿ ನೋಟಿಸ್ ನೀಡಿದ್ದು ಬಿಟ್ಟರೆ, ರೆಸಾರ್ಟ್ ತೆರವಾಗಿಲ್ಲ. ನೆಪಕ್ಕೆ ವಿದ್ಯುತ್ ಕಡಿತಗೊಳಿಸಲಾಗುತ್ತಿತ್ತು. ಮತ್ತೆ ಕೂಡಲೇ ವಿದ್ಯುತ್ ಸ್ಥಾಪಿಸಿಕೊಳ್ಳುತ್ತಿದ್ದರು. ಹೀಗಾಗಿ ಈ ಬಾರಿಯಾದರೂ ಅಧಿಕಾರಿಗಳು ರೆಸಾರ್ಟ್‌ಗಳನ್ನು ತೆರವುಗೊಳಿಸುವರೇ ಎಂದು ಹಿಂದೂಪರ, ಕರವೇ ಸಂಘಟನೆಗಳು ಪ್ರಶ್ನಿಸಿವೆ.

ರೆಸಾರ್ಟ್ ತೆರವಿಗೆ ಕೊಟ್ಟರು ಸ್ವಾಮಿ ಕೇಂದ್ರ ಕೋರ್ಟ್ ಮೊರೆ: ವಿಜಯನಗರ ಸಾಮ್ರಾಜ್ಯ ಐಹಿತ್ಯ ಕಾಪಾಡಲು ಹೊಸಪೇಟೆ ಕಲ್ಯಾಣ ಕೇಂದ್ರದವರು ಅನಧಿಕೃತ ರೆಸಾರ್ಟ್ ತೆರವಿಗೆ ಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯ ಅನಧಿಕೃತ ರೆಸಾರ್ಟ್‌ಗಳ ತೆರವಿಗೆ ಆದೇಶ ನೀಡಿದೆ. ಹಂಪಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಈ ಬಗ್ಗೆ ಜುಲೈ 11ರಂದು ಸಭೆ ನಡೆಸಿ, ಜುಲೈ 16ರಂದು, ಆನೆಗೊಂದಿ ಭಾಗದಲ್ಲಿನ ಅನಧಿಕೃತ ರೆಸಾರ್ಟ್‌ಗಳ ತೆರವಿಗೆ ದಿನಾಂಕ ನಿಗದಿಗೊಳಿಸಲಾಗಿದೆ.

ಏನೆಲ್ಲ ಸಿದ್ಧತೆ, ಜವಾಬ್ದಾರಿ: ಹಂಪಿ ಪ್ರಾಧಿಕಾರ ಹೊಸಪೇಟೆ, ಗಂಗಾವತಿ ತಹಶೀಲ್ದಾರ್‌ಗೆ ಅನಧಿಕೃತ ರೆಸಾರ್ಟ್ ತೆರವಿಗೆ ಬೇಕಾದ ಜೆಸಿಬಿ, ಹಿಟಾಚಿ ವಾಹನಗಳ ವ್ಯವಸ್ಥೆ, ಜೆಸ್ಕಾಂ ಇಲಾಖೆಗೆ ವಿದ್ಯುತ್ ಕಡಿತ ಜವಾಬ್ದಾರಿ, ಬಂದೋಬಸ್ತ್‌ಗೆ ಪೊಲೀಸ್ ಇಲಾಖೆ, ವೈದ್ಯಾಧಿಕಾರಿಗಳಿಗೆ ಆಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲು ಸೂಚನೆ ನೀಡಿದ್ದು, ಎಲ್ಲ ಅಧಿಕಾರಿಗಳು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

# ಅಧಿಕಾರ ವಿಕೇಂದ್ರಿಕರಣ ಸದ್ಬಳಕೆಯಾಗಲಿ: ನಂಜಯ್ಯನಮಠ

**ರಬಕವಿ–ಬನಹಟ್ಟಿ :** ರಾಜ್ಯದಲ್ಲಿ ಶಾಸಕತ್ವದ ನಂತರದ ಸ್ಥಾನಗಳಾದ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸದಸ್ಯತ್ವಕ್ಕೆ ಚುನಾವಣೆಗಳು ನಡೆಯುವಲ್ಲಿ ತೀವ್ರ ವಿಳಂಬವಾಗಿರುವದಕ್ಕೆ ಮೀಸಲಾತಿ ಹಾಗು ಗ್ರಾಮಗಳ ಗಡಿ ಗುರುತಿಸುವ ಸಮಸ್ಯೆ ಎದುರಾಗಿತ್ತು.

ಇದೀಗ ಎಲ್ಲವೂ ಪರಿಹಾರಗೊಂಡಿದ್ದು ಶೀಘ್ರವೇ ಗ್ರಾಮೀಣಾಭಿವೃದ್ಧಿಗೆ ಚುನಾವಣೆ ನಡೆಸುವಲ್ಲಿ ಸರ್ಕಾರ ನಿರ್ಣಯ ಕೈಗೊಳ್ಳಬೇಕೆಂದು ಬಾಗಲಕೋಟೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್. ಜಿ. ನಂಜಯ್ಯನಮಠ ಸರ್ಕಾರಕ್ಕೆ ಒತ್ತಾಯಿಸಿದರು.

ಬನಹಟ್ಟಿಯ ಸಿದ್ಧರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ನ್ಯಾಯಾಲಯ ಹಾಗು ಚುನಾವಣಾ ಆಯೋಗವೂ ಸಹಿತ ಚುನಾವಣೆ ನಡೆಸುವಂತೆ ಸೂಚಿಸಿದೆ. ಪಕ್ಷದ ಮುಖಂಡರ, ನಾಯಕರ ಹಾಗು ಕಾರ್ಯಕರ್ತರ ಭಾವನೆಗಳ ಒತ್ತಡದಿಂದ ಸ್ವಪಕ್ಷದ ಸರ್ಕಾರವಿದ್ದರೂ ಒತ್ತಾಯ ಪಡಿಸುತ್ತಿರುವದು ಅನಿವಾರ್ಯ ಆಗಿದೆಯೆಂದು ನಂಜಯ್ಯನಮಠ ತಿಳಿಸಿದರು.

ಈ ಕುರಿತು ಜುಲೈ 16 ರಂದು ಸಚಿವ ಪ್ರಿಯಾಂಕ ಖರ್ಗೆಯವರೊಂದಿಗೂ ಸಮಾಲೋಚನೆ ನಡೆಸುವ ಮೂಲಕ ರಾಜ್ಯದ ನಿಗಮ, ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾಗಿದೆ. ನಿರ್ದೇಶಕ ಮಂಡಳಿಗೂ ಸದಸ್ಯರ ಆಯ್ಕೆ ನಡೆಯಬೇಕಿದೆ. ಇವೆಲ್ಲದರ ಕುರಿತಾಗಿ ಚರ್ಚೆ ನಡೆಸುವದಾಗಿ ಸ್ಪಷ್ಟಪಡಿಸಿದರು.

ಹೈಕಮಾಂಡ್ ನಿರ್ಣಯವೇ ನನ್ನ ನಿರ್ಧಾರ: ಕಳೆದ ಐದೂವರೆ ವರ್ಷಗಳಿಂದ ಜಿಲ್ಲಾಧ್ಯಕ್ಷರಾಗಿರುವ ಎಸ್. ಜಿ. ನಂಜಯ್ಯನಮಠ ಮಾತನಾಡಿ, ನೂತನ ಅಧ್ಯಕ್ಷ ಸ್ಥಾನಕ್ಕೆ ಜಿಲ್ಲೆಯಿಂದ ಮೂರ್ನಾಲ್ಕು ಆಕಾಂಕ್ಷಿಗಳಿದ್ದಾರೆ.

ಜುಲೈ 15 ರಂದು ಬಾಗಲಕೋಟೆಯಲ್ಲಿ ಪಕ್ಷದ ವೀಕ್ಷಕರ ಸಭೆ ನಡೆಯಲಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಏಳು ವಿಧಾನಸಭೆ ಕ್ಷೇತ್ರದಲ್ಲಿ ಐದು ಕಡೆಗಳಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಸಾಧಿಸಿದೆ. ತೇರದಾಳ ಮತ್ತು ಜಮಖಂಡಿಯಲ್ಲಿಯೂ ಕಾಂಗ್ರೆಸ್ ಗೆಲುವಾಗಬೇಕಿತ್ತು. ಆದರೆ ಅಲ್ಲಿ ಬಂಡಾಯದ ಬಿಸಿಯಿಂದ ಸೋಲುಣಬೇಕಾದ ಸ್ಥಿತಿ ಎದುರಾಗಿತ್ತು.

ಈಗಾಗಲೇ ಬಂಡುಖೋರರು ಮತ್ತೇ ಕಾಂಗ್ರೆಸ್ ಪಕ್ಷಕ್ಕೆ ವಾಪಸ್ ಬಂದಿರುವ ಕಾರಣ ಮುಂದಿನ ಚುನಾವಣೆಯಲ್ಲಿ ಇಡೀ ಜಿಲ್ಲೆಯೇ ಕಾಂಗ್ರೆಸ್ಮಯವಾಗಲಿದೆ ಎಂದು ನಂಜಯ್ಯನಮಠ ತಿಳಿಸಿದರು.

ಈ ಸಂದರ್ಭದಲ್ಲಿ ಸಿದ್ದು ಕೊಣ್ಣೂರ, ಮಲ್ಲಪ್ಪ ಸಿಂಗಾಡಿ, ಸಂಗಪ್ಪಣ್ಣ ಕುಂದಗೋಳ, ಭೀಮಶಿ ಮಗದುಮ್, ಗಿರೀಶ ಅಂಕಲಗಿ, ಪರಪ್ಪ ಉರಭಿನವರ, ಬಸವರಾಜ ಕೊಕಟನೂರ, ನೀಲಕಂಠ ಮುತ್ತೂರ, ಶೇಖರ ಹಕ್ಕಲದಡ್ಡಿ, ಶಂಕರ ಕೆಸರಗೊಪ್ಪ, ಸುರೇಶ ಉತ್ತೂರ, ಸಂಜು ಜೋತಾವರ, ರಾಜೇಂದ್ರ ಭದ್ರನ್ನವರ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಪ್ರತಿಭೆ ಎಂಬುವುದು ಒಂದು ಜಾತಿಗೆ, ಧರ್ಮಕ್ಕೆ ಸೇರಿದ್ದಲ್ಲ



**ಬೀಳಗಿ :** ಪ್ರತಿಭೆಯೆನ್ನುವುದು ಒಂದು ಜಾತಿ, ಮತ, ಪಂಥಗಳಿಗೆ ಸೀಮಿತವಾದುದಲ್ಲ. ಅದು ಸರ್ವರ ಸ್ವತ್ತು ಎಂದು ಬಾಗಲಕೋಟೆ ಎ.ಪಿ.ಎಮ್.ಸಿ. ಮಾಜಿ ಅಧ್ಯಕ್ಷ ಕುಮಾರ ಯಳ್ಳಿಗುತ್ತಿ ಹೇಳಿದರು.

ಪಟ್ಟಣದ ಸಿದ್ಧೇಶ್ವರ ಮಂಗಲ ಕಾರ್ಯಾಲಯದಲ್ಲಿ ತಾಲೂಕಾ ಗಾಣಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘ, ಗಾಣಿಗ ಸಮಾಜ ನೌಕರರ ಕ್ಷೇಮಾಭಿವೃದ್ಧಿ ಸಂಘ, ಯುವಘಟಕ, ಮಹಿಳಾಘಟಕ, ನಗರಘಟಕ ಹಾಗೂ ಜ್ಯೋತಿ ಪತ್ತಿನ ಸಹಕಾರಿ ಸಂಘ ನಿ., ಬೀಳಗಿ ಇವರ ಸಂಯುಕ್ತ ಆಶ್ರಯದಲ್ಲಿ ಜುಲೈ 13 ರಂದು ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕೆಪಿಸಿಸಿ ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡ ಮಾತನಾಡಿ, ಸಮಾಜದಲ್ಲಿ ಶಿಕ್ಷಣವಂತರು ಹೆಚ್ಚಾದರೆ ಸಮಾಜ ಆರೋಗ್ಯಕರವಾಗಿ ಉಳಿಯುತ್ತದೆ. ಹಾಗಾಗಿ ಪ್ರತಿಭೆಗಳನ್ನು ಪುರಸ್ಕರಿಸುವ ಕಾರ್ಯವನ್ನು ಸಮಾಜ ಆಯೋಜಿಸುತ್ತಿರುವುದು ಸ್ತುತ್ಯಾರ್ಹ ಕಾರ್ಯ ಎಂದು ತಿಳಿಸಿದರು.

ಸಮಾಜದ ಯುವಕರು, ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ, ಉತ್ತಮ ಸಂಸ್ಕಾರ ಪಡೆದು ಸದೃಢ ಸಮಾಜದ ನಿರ್ಮಾತೃಗಳಾಗಿ ಎಂದು ಕರೆ ನೀಡಿದರು.

ಬೆಳಗಾವಿ ವಿಭಾಗದ ಬಿಜೆಪಿಯ ಸಹಪ್ರಭಾರಿ ಬಸವರಾಜ ಯಂಕಂಚಿ ಮಾತನಾಡಿ,

ಸಜ್ಜನರ ಸಮಾಜ ನಿರ್ಮಾಣದ ಅವಶ್ಯಕತೆ ಬಹಳಷ್ಟಿದೆ. ಸಮಾಜ ಮುನ್ನಡೆಸುವವರು ಇನ್ನೊಬ್ಬರಿಗೆ ಮಾದರಿಯಾಗಿರಬೇಕು. ಗಾಣಿಗರ ಕುಲಕಸುಬು ಗಾಣದ ಎಣ್ಣೆ ಯಾರಿಸುವ ಮೂಲಕ ಜನರ ಜೀವನವನ್ನು ವಿಷಮ ಪರಿಸ್ಥಿತಿಯಿಂದ ರಕ್ಷಿಸುವ ಕೆಲಸ ನಮ್ಮ ಸಮಾಜ ಮಾಡಲು ಮತ್ತೆ ಗಾಣವನ್ನು ಪ್ರಾರಂಭಿಸಿ ಎಂದರು.

ಶೂರ್ಪಾಲಿ–ಕನಕನಾಳ ಔಗಿಗಿರಿ ಆಶ್ರಮದ ಗಿರೀಶಾನಂದ ಸ್ವಾಮೀಜಿ ಮಾತನಾಡಿ, ಪಾಲಕರು ಮಕ್ಕಳಿಗೆ ಕೇವಲ ಶಿಕ್ಷಣ ಕೊಟ್ಟರೆ ಸಾಲದು, ಜೊತೆಗೆ ಸಂಸ್ಕಾರ ಕೊಟ್ಟಾಗ ಮಾತ್ರ ನಾಡಿನ ಸತ್ಪ್ರಜೆಯಾಗಿ ಬದಕಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಬುದ್ನಿ ಸಿದ್ಧಾರೂಢ ಮಠದ ಸಿದ್ಧಾನಂದ ಸ್ವಾಮೀಜಿ ಮಾತನಾಡಿ,

ಗಾಣಿಗ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪಿಸುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ಸಮಾಜವನ್ನು ತರಲು ಸರ್ಕಾರ ಮುಂದಾಗಬೇಕು. ಇದಕ್ಕೆ ಸಮಾಜ ಒಗ್ಗಟ್ಟಾಗಿ ಕೆಲಸ ಮಾಡಬೇಕೆಂದು ಹೇಳಿದರು. ಎಸ್ಸೆಸ್ಸೆಲ್ಸಿ, ಪಿಯುಸಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಮತ್ತು ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಗಾಣಿಗ ಸಮಾಜದ ತಾಲೂಕಾಧ್ಯಕ್ಷ ಹನುಮಂತ ಸೂಳಿಕೇರಿ ಅಧ್ಯಕ್ಷತೆ ವಹಿಸಿದ್ದರು. ಜ್ಯೋತಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಪ್ಪ ಅವಟಿ, ಉಪಾಧ್ಯಕ್ಷ ಶಿವಪ್ಪ ಬೊಮ್ಮಣ್ಣವರ, ಗಾಣಿಗ ಸಮಾಜದ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲೂಕಾಧ್ಯಕ್ಷ ಬಸವರಾಜ ಸುಳ್ಳದ, ನಗರ ಘಟಕದ ಅಧ್ಯಕ್ಷ ಹನುಮಂತ ಮೆಳ್ಳಿಗೇರಿ, ಯುವ ಘಟಕದ ಅಧ್ಯಕ್ಷ ನಿಂಗಪ್ಪ ಹುಗ್ಗಿ, ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ಬಗಲಿ, ದಾಕ್ಷಾಯಣಿ ಜಂಬಗಿ ಮತ್ತಿತರರು ಹಾಜರಿದ್ದರು. ಬಸವರಾಜ ಬಗಲಿ ಸ್ವಾಗತಿಸಿದರು. ಸಿ. ಎಸ್. ಉಳ್ಳಾಗಡ್ಡಿ ಸೊಗಸಾಗಿ ನಿರೂಪಿಸಿದರು. ಕೆ. ಪಿ. ಗಾಣಿಗೇರ ವಂದಿಸಿದರು.

### ಕಾನೂನು ಪದವೀಧರರಿಗೆ ತರಬೇತಿ

**ಬಾಗಲಕೋಟೆ :** 2025–26ನೇ ಸಾಲಿಗೆ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ 2 ವರ್ಷಗಳ ತರಬೇತಿ ನೀಡಲಾಗುತ್ತದೆ. ಅರ್ಹ ಅಭ್ಯರ್ಥಿಗಳು www.sw.kar.nic ವೆಬಸೈಟ್‌ನಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್ಲೈನ್ ಅರ್ಜಿ ಸಲ್ಲಿಸಿದ ನಂತರ ಎಲ್ಲಾ ಅಗತ್ಯ ದಾಖಲೆಗಳನ್ನು ತಮ್ಮ ತಾಲ್ಲೂಕಿನ ಸಹಾಯಕ ನಿರ್ದೇಶಕರ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ವರ್ಷಪೂರ್ತಿ (365 ದಿನ) ಅವಕಾಶವಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಲೋಕ್ ಅದಾಲತ್; 1,473 ಪ್ರಕರಣ ಇತ್ಯರ್ಥ



**ಕುಷ್ಟಗಿ:** ಇಲ್ಲಿಯ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ದಲ್ಲಿ ಒಟ್ಟು 1,473 ಪ್ರಕರಣಗಳನ್ನು ರಾಜಿಸಂಧಾನದ ಮೂಲಕ ಪರಿಹರಿಸಲಾಯಿತು.

ಅವುಗಳ ಪೈಕಿ ಹಿರಿಯ ಸಿವಿಲ್ ನ್ಯಾಯಾಲಯದ 102, ಪ್ರಧಾನ ಸಿವಿಲ್ ನ್ಯಾಯಾಲಯದ 529 ಹಾಗೂ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ಸೇರಿದ 806 ಪ್ರಕರಣಗಳು ಇತ್ಯರ್ಥಗೊಂಡವು.

ಮೂರೂ ನ್ಯಾಯಾಲಯಗಳಲ್ಲಿ ಬಾಕಿಯಿದ್ದ 7,999 ಪ್ರಕರಣಗಳ ಪೈಕಿ ಮೋಟಾರು ಅಪಘಾತ, ಚೆಕ್ ಅಮಾನ್ಯ, ವೈವಾಹಿಕ, ಜನನ, ರಾಜೀಯಾಗಬಲ್ಲ ಹಾಗೂ ಕ್ರಿಮಿನಲ್ ಪ್ರಕರಣಗಳು ಸೇರಿ ಒಟ್ಟು 2,180 ಪ್ರಕರಣಗಳನ್ನು ರಾಜಿಸಂಧಾನಕ್ಕೆ ಆಹ್ವಾನಿಸಲಾಗಿತ್ತು. ಒಟ್ಟು 2.99 ಕೋಟಿ ಪರಿಹಾರ ಕೊಡಿಸಲಾಯಿತು. ಬ್ಯಾಂಕ್ ವಸೂಲಾತಿಗೆ ಸಂಬಂಧಿಸಿದ 2 ಪ್ರಕರಣಗಳು ಇತ್ಯರ್ಥಗೊಂಡಿದ್ದು, ವಸೂಲಿಯಾದ 2.80 ಲಕ್ಷ ಹಣವನ್ನು ಸಂಬಂಧಿಸಿದ ಬ್ಯಾಂಕ್‌ಗಳಿಗೆ ಜಮೆ ಮಾಡಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶ ಆರ್.ಮಂಜುನಾಥ, ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್. ಪೂಜೇರಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮಂಜುನಾಥ ಚೌವಲಗಿ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಸಂಗನಗೌಡ ಪಾಟೀಲ, ಸರ್ಕಾರಿ ವಕೀಲರಾದ ಇಂದಿರಾ ಸುಹಾಸಿನಿ, ಎಲ್.ರಾಯನಗೌಡ, ಪರಸಪ್ಪ ಗುಜಮಾಗಡಿ, ಕಾನೂನು ಸಮಿತಿ ಸಹಾಯಕ ಸುನಿಲಕುಮಾರ ಹಾಗೂ ಇತರೆ ವಕೀಲರು, ಸಿಬ್ಬಂದಿ ಹಾಗೂ ಕಕ್ಷಿದಾರರು ಹಾಜರಿದ್ದರು.

# ಕುಷ್ಟಗಿ–ಯಶವಂತಪುರವರೆಗೆ ರೈಲು ಸೇವೆ: ಸಚಿವರಿಗೆ ಮನವಿ



**ಕುಷ್ಟಗಿ :** ಪಟ್ಟಣದಿಂದ ಯಶವಂತಪುರ ಸೇರಿದಂತೆ ವಿವಿಧ ಕಡೆ ರೈಲು ಸೇವೆ ಒದಗಿಸುವಂತೆ ಇಲ್ಲಿಯ ರೈಲ್ವೆ ಹೋರಾಟ ಸಮಿತಿ ರೈಲ್ವೆ ಸಚಿವರಿಗೆ ಮನವಿ ಮಾಡಿದೆ.

ಹೊಸಪೇಟೆಯಲ್ಲಿ ಶುಕ್ರವಾರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿದ ಹೋರಾಟ ಸಮಿತಿಯವರು ಮನವಿ ಸಲ್ಲಿಸಿದರು.

ಸದ್ಯ ಪಟ್ಟಣದಿಂದ ಬೆಳಗಿನ ಅವಧಿಯಲ್ಲಿ ಕೇವಲ ಒಂದು ರೈಲು ಮಾತ್ರ ಹುಬ್ಬಳ್ಳಿವರೆಗೆ ಸಂಚರಿಸುತ್ತಿದ್ದು, ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಗದಗ?ವಾಡಿ ರೈಲ್ವೆ ಮಾರ್ಗ, ನಿಲ್ದಾಣಗಳು ಉಳಿದ ಅವಧಿಯಲ್ಲಿ ಬಿಕೊ ಎನ್ನುತ್ತಿವೆ. ಹಾಗಾಗಿ ಬೆಳಿಗ್ಗೆ 10 ಗಂಟೆಗೆ ಹುಬ್ಬಳ್ಳಿವರೆಗೆ ಪ್ಯಾಸೆಂಜರ್ ರೈಲು ಓಡಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು ತಲುಪಲು ಕುಷ್ಟಗಿ, ಯಲಬುರ್ಗಾ, ಕುಕನೂರು ಭಾಗದ ಹಾಗೂ ಸುತ್ತಲಿನ ಪಟ್ಟಣ, ಗ್ರಾಮಾಂತರ ಪ್ರದೇಶದ ಜನರು ದುಬಾರಿ ಪ್ರಯಾಣ ದರದ ಸಾರಿಗೆ ವ್ಯವಸ್ಥೆಯನ್ನೇ ಅವಲಂಬಿಸಿದ್ದು, ಯಶವಂತಪುರದವರೆಗೆ ನೇರ ರೈಲು ಸಂಚರಿಸಲು, ಬೆಂಗಳೂರು?ಹೊಸಪೇಟೆ ಮತ್ತು ಹರಿಹರ?ಹೊಸಪೇಟೆ ರೈಲುಗಳನ್ನು ತಳಕಲ್ ಮಾರ್ಗವಾಗಿ ಕುಷ್ಟಗಿವರೆಗೆ ವಿಸ್ತರಿಸಬೇಕು. ಮತ್ತು ಕುಷ್ಟಗಿ, ನರಗುಂದ, ಘಟಪ್ರಭಾ ಹಾಗೂ ಚಿತ್ರದುರ್ಗ, ಆಲಮಟ್ಟಿ ನೂತನ ರೈಲ್ವೆ ಮಾರ್ಗಗಳ ತಾಂತ್ರಿಕ ಸಮೀಕ್ಷೆಗೆ ಅನುಮೋದನೆ ನೀಡಬೇಕು' ಎಂದು ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಸಚಿವ ಸೋಮಣ್ಣ ಕೆಲವೇ ವರ್ಷಗಳ ಅವಧಿಯಲ್ಲಿ ಕುಷ್ಟಗಿವರೆಗೂ ರೈಲು ಓಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ಬೇಡಿಕೆಗಳನ್ನು ಪರಿಶೀಲಿಸಲಾಗುವುದೆಂದು ಹೇಳಿದರು ಎಂದು ಸಮಿತಿ ತಿಳಿಸಿದೆ. ರೈಲ್ವೆ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ವೀರೇಶ ಬಂಗಾರಶೆಟ್ಟರ, ಮಹಾಂತೇಶ ಮಂಗಳೂರು, ಎಸ್. ಎನ್.ಘೋರ್ಪಡೆ, ಮಂಜುನಾಥ ಮಹಾಲಿಂಗಪುರ, ಭರತೇಶ ಜೋಷಿ ಹಾಗೂ ಇತರರು ಇದ್ದರು.

# ತೇರದಾಳ ಬಾಲಕಿಯರ ವಸತಿ ನಿಲಯಕ್ಕೆ ಶಾಸಕರ ಅನಿರೀಕ್ಷಿತ ಭೇಟಿ



**ತೇರದಾಳ :** ಇಲ್ಲಿನ ದೇವರಾಜ ನಗರದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಶಾಸಕ ಸಿದ್ದು ಸವದಿ ಆಕಸ್ಮಿಕ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸಿದರು.

ಶಾಸಕರು ಆಗಮಿಸುತ್ತಿದ್ದಂತೆ ವಿದ್ಯಾರ್ಥಿನಿಯರು ಬಹಳಷ್ಟು ಖುಷಿಯಿಂದ ಅವರನ್ನು ಬರಮಾಡಿಕೊಂಡರು. ಊಟ, ವಸತಿ, ಸೌಲಭ್ಯಗಳ ಕುರಿತು ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದುಕೊಂಡರು.

ಎಲ್ಲ ವ್ಯವಸ್ಥೆ ಬಹಳಷ್ಟು ಅಚ್ಚುಕಟ್ಟಾಗಿ ನಡೆಯುತ್ತಿದೆ. ಯಾವುದೇ ಸಮಸ್ಯೆ ಇಲ್ಲ ಎಂದು ಶಾಸಕರ ಮುಂದೆ ವಿದ್ಯಾರ್ಥಿನಿಯರು ಹೇಳಿದಾಗ ಶಾಸಕರು ಕೂಡ ಖುಷಿ ಪಟ್ಟರು. ಕೆಲ ಕಾಲ ವಿದ್ಯಾರ್ಥಿನಿಯರ ಜತೆಗೆ ಸಂವಾದ ನಡೆಸಿದ ಶಾಸಕರು ವಿದ್ಯಾರ್ಥಿನಿಯರ ಚುರುಕುತನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಏನೇ ಸಮಸ್ಯೆ ಇದ್ದರೂ ಕೂಡ ತಮ್ಮನ್ನು ಸಂಪರ್ಕಿಸಿ ಎಂದು ಸಲಹೆ ನೀಡಿದರು. ಬಿಜೆಪಿ ನಗರ ಘಟಕ ಅಧ್ಯಕ್ಷ ಮಹಾವೀರ ಕೊಟಕನೂರ, ನಿಲಯದ ಮೇಲ್ವಿಚಾರಕಿ, ಅಡುಗೆಯವರು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಾಜಪೇಯಿ ನಗರ ವಸತಿ ಯೋಜನೆ: ಅನುದಾನ ಬಿಡುಗಡೆಗೆ ಸಚಿವ ಜೋಶಿಗೆ ಮನವಿ



**ತೇರದಾಳ :** 2021–22 ನೇ ಸಾಲಿನ ಅಟಲ್ ಬಿಹಾರಿ ವಾಜಪೇಯಿ ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ನಗರ ವಸತಿ ಯೋಜನೆಯಡಿ ಆಯ್ಕೆಗೊಂಡ ಫಲಾನುಭವಿಗಳಿಗೆ ಕೇಂದ್ರ ಸರಕಾರ ನೀಡುವ 1.5 ಲಕ್ಷ ರೂ. ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕೆಂದು ಕ್ಷೇತ್ರದ ಶಾಸಕ ಸಿದ್ದು ಸವದಿ ಅವರ ಶಿಫಾರಸ್ಸಿನ ಪತ್ರದೊಂದಿಗೆ ಪುರಸಭೆ ಬಿಜೆಪಿ ಸದಸ್ಯರಾದ ಸಚಿನ ಕೊಡತೆ, ಸಂತೋಷ ಜಮಖಂಡಿ, ಕಾಶಿನಾಥ ರಾಠೋಡ ಹಾಗೂ ಪಕ್ಷದ ಮತಕ್ಷೇತ್ರದ ಓಬಿಸಿ ಅಧ್ಯಕ್ಷ ಶಂಕರ ಕುಂಬಾರ ಜುಲೈ 13 ರಂದು ಧಾರವಾಡಕ್ಕೆ ತೆರಳಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಸಲ್ಲಿಸಿದರು.

ಈ ಯೋಜನೆಯಡಿ ತೇರದಾಳದಲ್ಲಿ ಸುಮಾರು 477 ಫಲಾನುಭವಿಗಳು ಆಯ್ಕೆಗೊಂಡಿದ್ದು, ರಾಜ್ಯ ಸರಕಾರ ನೀಡುವ ಅನುದಾನ ಪಡೆದುಕೊಂಡಿದ್ದಾರೆ. ಆದರೆ ಕೇಂದ್ರ ಸರಕಾರ ನೀಡುವ 1.5 ಲಕ್ಷ ರೂ. ಅನುದಾನ ಬಾರದ ಕಾರಣ ಫಲಾನುಭವಿಗಳು ಸಾಕಷ್ಟು ಸಂಕಷ್ಟ ಅನುಭವಿಸುವಂತಾಗಿದೆ. ಬಹುತೇಕ ಫಲಾನುಭವಿಗಳು ಸಾಲಸೂಲ ಮಾಡಿಕೊಂಡು ಮನೆಗಳನ್ನು ಪೂರ್ಣಗೊಳಿಸಿದ್ದಾರೆ. ಇನ್ನು ಕೆಲವರು ಹಣ ಸಿಗದಿದ್ದರಿಂದ ಕಟ್ಟಡದ ಕೆಲಸವನ್ನು ಅಧ9ಕ್ಕೇ ಬಿಟ್ಟಿದ್ದಾರೆ. ಇದು ಕೇವಲ ಒಂದು ಪುರಸಭೆಯ ಸಮಸ್ಯೆಯಲ್ಲ. ಬದಲಾಗಿ ರಾಜ್ಯದ ಎಲ್ಲಾ ಸ್ಥಳೀಯ ಸಂಘ ಸಂಸ್ಥೆಗಳಲ್ಲಿ ಇದೇ ರೀತಿ ಸಮಸ್ಯೆ ಆಗಿದೆ. ಆದ–ರಿಂದ ಕೂಡಲೇ ಈ ಕುರಿತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸಮಸ್ಯೆಯ ಕುರಿತು ಮನವರಿಕೆ ಮಾಡಿಕೊಡಬೇಕು. ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದರು. ಸಚಿವ ಜೋಶಿ ಅವರು ಸಕಾರಾತ್ಮಕವಾಗಿ ಸ್ಪಂಧಿಸಿದ್ದು , ಈ ಕುರಿತು ಸಂಸತ್ತಿನಲ್ಲಿ ಧ್ವನಿ ಎತ್ತಿ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

# ಶಕ್ತಿ ಯೋಜನೆ ಮಹಿಳೆಯರ ಪಾಲಿಗೆ ಆಶಾಕಿರಣ



**ತೇರದಾಳ :** ರಾಜ್ಯ ಸರಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾಗಿರುವ ಶಕ್ತಿ ಯೋಜನೆ ಮಹಿಳೆಯರ ಪಾಲಿಗೆ ಆಶಾಕಿರಣವಾಗಿದೆ ಎಂಬುದಕ್ಕೆ ಮಹಿಳೆಯರು ಪ್ರಯಾಣಿಸಿದ ಸಂಖ್ಯೆಯೇ ಉದಾಹರಣೆ ಆಗಿದೆ ಎಂದು ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಪ್ರವೀಣ ನಾಡಗೌಡ ಹೇಳಿದರು.


ಯೋಜನೆಯಡಿ ಐನೂರು ಕೋಟಿ ಮಹಿಳೆಯರು ಪ್ರಯಾಣಿಸಿದ ನಿಮಿತ್ಯ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ನೇಮಣ್ಣ ಸಾವಂತನವರ ಮಾತನಾಡಿ, ಐದು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸದೆ ಮುನ್ನಡೆಸಿಕೊಂಡು ಹೋಗುವ ಮೂಲಕ

ರಾಜ್ಯದ ಮತದಾರರಿಗೆ ನೀಡಿದ ಆಶ್ವಾಸನೆಯನ್ನು ಸರಕಾರ ಉಳಿಸಿಕೊಂಡಿದೆ ಎಂದು ಹೇಳಿದರು. ಶಾಸಕ ಸಿದ್ದು ಸವದಿ ಅಧ್ಯಕ್ಷತೆ ವಹಿಸಿದ್ದರು.

ತಹಶೀಲ್ದಾರ್ ವಿಜಯಕುಮಾರಕಡಕೋಳ, ಪುರಸಭೆ ಅಧ್ಯಕ್ಷೆಶಿಲ್ಪಾರೋಡಕರ, ಸುರೇಶಕಬಾಡಗಿ, ಹನಮಂತ ರೋಡನ್ನವರ, ಗೌತಮ ರೋಡಕರ, ಮಹಾವೀರ ಕೊಕಟನೂರ, ಶಂಕರ ಕುಂಬಾರ, ಕುಮಾರ ಸರಿಕರ, ಮೌಲಾನಾ ಹಾಫೀಜ್ ಚಿತ್ರಬಾನುಕೋಟೆ, ಫಜಲ್ ಅತಾರಾವುತ್, ಅಂಗನವಾಡಿ ಮೇಲ್ವಿಚಾರಕಿ ಕ–ರಿಗಾರ, ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಮಂಜುಳಾ ಸರಿಕರ, ಪಿ. ಎಸ್. ಮಾಸ್ತಿ, ಗ್ಯಾರಂಟಿ ಸಮಿತಿ ಸದಸ್ಯರು, ಪುರಸಭೆ ಸದಸ್ಯರು, ಮುಖಂಡರು ಭಾಗವಹಿಸಿದ್ದರು.

# ಓಲೆಮಠದಿಂದ ಓಣಿ ಓಣಿಯಲ್ಲಿ ವಚನ ಶ್ರಾವಣ: ಆನಂದ ಶ್ರೀಗಳು



**ಜಮಖಂಡಿ :** ಧರ್ಮದ ಆಚ–ರಣೆ, ಆರೋಗ್ಯ ರಕ್ಷಣೆಯ ಅರಿವು ಹಾಗೂ ಆಧ್ಯಾತ್ಮಿಕ ಚಿಂತನೆ ಕು–ರಿತು ಜಾಗೃತಿ ಮೂಡಿಸಲು ಶ್ರಾವಣ ಮಾಸದ ನಿಮಿತ್ಯ ನಗರದ ವಿವಿಧ ಓಣಿಗಳಲ್ಲಿ ಓಲೆಮಠದ ಆಶ್ರಯದಲ್ಲಿ ಜುಲೈ 25 ರಿಂದ ಆಗಸ್ಟ 20 ರವರೆಗೆ ವಚನ ಶ್ರಾವಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಓಲೆಮಠದ ಆನಂದ ದೇವರು ಶ್ರೀಗಳು ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಹಮ್ಮಿಕೊಳ್ಳಲಿರುವ ವಚನ ಶ್ರಾವಣ ಕಾರ್ಯಕ್ರಮದ ಕು–ರಿತು ಶ್ರೀಮಠದ ಸಭಾಂಗಣದಲ್ಲಿ ಭಾನುವಾರ ಸಂಜೆ ಕರೆದಿದ್ದ ಸದ್ಭಕ್ತರ ಪೂರ್ವಭಾವಿ ಸಭೆಯ ಸಾನಿಧ್ಯವಹಿಸಿ ಅವರು ಆಶೀರ್ವಚನ ನೀಡಿದರು.

ಜುಲೈ 25 ರಿಂದ ಆಗಸ್ಟ್ 20 ರವರೆಗೆ ಪ್ರತಿದಿನ ಸಂಜೆ 6–30 ಗಂಟೆಗೆ ಕಾರ್ಯಕ್ರಮಗಳು ದಿನಕ್ಕೊಂದು ಓಣಿಯಲ್ಲಿ ಆರಂಭವಾಗುತ್ತವೆ. ಸಂಜೆ 6–30 ರಿಂದ ಸಂಗೀತ ಸೇವೆ, 7–00 ಗಂಟೆಯಿಂದ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಹಾಗೂ 7–30 ರಿಂದ ಶ್ರೀಗಳಿಂದ ಪ್ರವಚನ ನಡೆಯಲಿವೆ.

ಆಸ್ತಿ, ಅಂತಸ್ತು, ಹಣ, ಚಿನ್ನ–ಬೆಳ್ಳಿ ಇವು ನಿಜವಾದ ಸಂಪತ್ತು ಅಲ್ಲ. ಕುಡಿಯುವ ನೀರು, ತಿನ್ನುವ ಅನ್ನ ಹಾಗೂ ಒಳ್ಳೆಯ ವಿಚಾರದ ಮಾತುಗಳು ನಿಜವಾದ ಸಂಪತ್ತು. ಆದ್ದರಿಂದ ಬಸವಾದಿ ಶಿವಶರಣರ ವಚನಗಳನ್ನು ಆಧರಿಸಿ ಒಳ್ಳೆಯ ವಿಚಾರಗಳ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಓಲೆಮಠದ ಆವರಣದಲ್ಲಿ ಮಾತ್ರ ಭಕ್ತಿಯವಾತಾವರಣನಿರ್ಮಿಸುವ ಬದಲಾಗಿ ಓಣಿ ಓಣಿಯಲ್ಲಿ ಶ್ರೀಮಠದ ವಾತಾವರಣ ಸೃಷ್ಟಿಸುವ ಉದ್ದೇಶದಿಂದ ಓಣಿ ಓಣಿಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಆಶೀರ್ವಚನ ನೀಡಿದರು.

ಮುತ್ತಿನಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯವಹಿಸಿ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ಶ್ರಾವಣ ಮಾಸ ಅತ್ಯಂತ ಪವಿತ್ರವಾಗಿದೆ.

ಹಾಗಾಗಿಯುವಪೀಳಿಗೆಗೆಒಳ್ಳೆಯ ಸಂಸ್ಕಾರ ನೀಡಿ ಸನ್ನಡತೆಯತ್ತ ಅವರ ಮನ ಪರಿವರ್ತನ ಮಾಡುವುದು ವಚನ ಶ್ರಾವಣ ಕಾರ್ಯಕ್ರಮದ ಧ್ಯೇಯವಾಗಿದೆ ಎಂದು ಆಶೀರ್ವಚನ ನೀಡಿದರು.

ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ ಮುಖ್ಯ ಅತಿಥಿ–ಯಾಗಿ ಮಾತನಾಡಿ, ಶ್ರೀಮಠದ ಆಶ್ರಯದಲ್ಲಿ ಹಮ್ಮಿಕೊಳ್ಳಲಿರುವ ವಚನ ಶ್ರಾವಣ ಕಾರ್ಯಕ್ರಮದ ಯಶಸ್ಸಿಗೆ ಜಮಖಂಡಿ ನಗರಸಭೆ ಸಂಪೂರ್ಣ ಸಹಾಯ, ಸಹಕಾರ ನೀಡುತ್ತದೆ ಎಂದು ಭರವಸೆ ನೀಡಿದರು.

ಹೃದಯರೋಗ ತಜ್ಞ ಡಾ. ಎಚ್. ಜಿ. ದಡ್ಡಿ, ಬಸವಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ. ಬಸವರಾಜ ಕಡ್ಡಿ, ನಗರಸಭೆ ಸದಸ್ಯ ಸಿದ್ದು ಮೀಶಿ, ನಿವೃತ್ತ ಶಿಕ್ಷಕ ಎಂ. ಡಿ. ಸಂಖ ಮಾತನಾಡಿ ಸಲಹೆ, ಸೂಚನೆಗಳನ್ನು ನೀಡಿದರು.

ಬಿ. ಎನ್. ಅಸ್ಕಿ ಪ್ರಾರ್ಥನೆ ಗೀತೆ ಹಾಡಿದರು.

ಎಸ್.ವೈ.ಪಾಟೀಲಸ್ವಾಗತಿಸಿದರು. ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಪ್ರಾಸ್ತಾವಿಕವಾಗಿಮಾತನಾಡಿದರು. ನಿವೃತ್ತ ಶಿಕ್ಷಕ ಎಸ್. ಎಚ್. ಮಠಪತಿ, ಬಸವರಾಜ ಬಳಗಾರ ನಿರೂಪಿಸಿದರು. ರುದ್ರಯ್ಯ ಕರಡಿ ವಂದಿಸಿದರು.

# ನಗರೋತ್ಥಾನ ನಾಲ್ಕನೇ ಹಂತದ ಕಾಮಗಾರಿಗಳಿಗೆ ಚಾಲನೆ



**ತೇರದಾಳ :** ಸರಕಾರಗಳು ಅಭಿವೃದ್ಧಿಗೆ ನೀಡುವ ಅನುದಾನ ಸದ್ಬಳಕೆಯಾದಾಗ ಮಾತ್ರ ಯೋಜನೆಗೆ ಮಹತ್ವ ಬರುತ್ತದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ನಗರೋತ್ಥಾನ ನಾಲ್ಕನೇ ಹಂತದ ಯೋಜನೆಯಡಿ ಇಲ್ಲಿನ ಸಂತ ಸೇವಾಲಾಲ ಓಣಿಯಲ್ಲಿ, ಸಿದ್ಧೇಶ್ವರ ಓಣಿ, ಗುಮ್ಮಟ ಓಣಿ ಹಾಗೂ ಬೋಗಾರ ಬಸದಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳಬೇಕು ಹಾಗೂ ನಿಗದಿತ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ತಾಕೀತು ಮಾಡಿದ ಸವದಿ, ಕಳಪೆ ಕಾಮಗಾರಿ ಕೈಗೊಂಡರೆ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಿದರು.

ಪುರಸಭೆ ಸದಸ್ಯ ಕಾಶಿನಾಥ ರಾಠೋಡ, ಸಂತೋಷ ಜಮಖಂಡಿ, ಸಚಿನ ಕೊಡತೆ, ಶಂಕರ ಕುಂಬಾರ, ಅನಿಲ ವಡ್ಡರ, ಮಹಾವೀರ ಕೊಕಟನೂರ, ಅಪ್ಪು ಮಂಗಸೂಳಿ, ಶ್ರೀಶೈಲ ಮೋದಿ, ಈಶ್ವರ ಕಿತ್ತೂರ, ಮಂಗಲಸಿಂಗ್ ರಾಠೋಡ, ಗಣಪತಿ ಗಾಡಿವಡ್ಡರ, ಸುರೇಶ ರೇನಕೆ, ರಮೇಶ ಪಟ್ಟಣಶೆಟ್ಟಿ, ಶೀತಲ ಗುಳನ್ನವರ, ಮುರಗೇಶ ಮಿರ್ಜಿ, ವಿಠ್ಠಲ ತಟ್ರೆ, ರಾಮಣ್ಣ ಹಿಡಕಲ್, ಮುಖ್ಯಾಧಿಕಾರಿ ಎಫ್. ಬಿ. ಗಿಡ್ಡಿ ಹಾಜರಿದ್ದರು.

# ಉತ್ತರಾದಿಮಠದಲ್ಲಿ ಶ್ರೀಕೇಶವ ದೇವರು ವಿರಾಜಮಾನ..!



**ಬಾಗಲಕೋಟೆ :** ಉತ್ತರಾದಿಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥಶ್ರೀಪಾದಂಗಳವರು ಜುಲೈ 13 ರಂದು ನವನಗರದ ಶ್ರೀಮಠದಲ್ಲಿ ಕಿಲ್ಲಾ ಓಣಿಯಲ್ಲಿದ್ದ ಐತಿಹಾಸಿಕ ಶ್ರೀಕೇಶವದೇವರ ಮೂರ್ತಿಯನ್ನು ಪುನರ್ ಪ್ರತಿಷ್ಠಾಪಿಸಿದರು.

ಬೆಳಿಗ್ಗೆ ಶ್ರೀಗಳಿಂದ ಜರುಗಿದ ಶ್ರೀ ಮೂಲರಾಮದೇವರ ಪೂಜೆಯನ್ನು ಕಣ್ತುಂಬಿಕೊಳ್ಳಲು ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಶ್ರೀಕೇಶವ ದೇವರು, ಶ್ರೀಮಠದ ಆವರಣದಲ್ಲಿ ಶ್ರೀರುದ್ರದೇವರನ್ನು ಪ್ರತಿಷ್ಠಾಪಿಸಿದ ನಂತರ ಸಭಾ ಕಾರ್ಯಕ್ರಮದಲ್ಲಿ ಸ್ವಾಮೀಜಿ ಪಾಲ್ಗೊಂಡರು. ಸಭೆಯಲ್ಲಿ ಶ್ರೀಮಠಕ್ಕೆ ಶ್ರೀಕೇಶವದೇವರ ವಿಗ್ರಹವನ್ನು ಅರ್ಪಿಸಿದ ಶ್ರೀನಿವಾಸಾಚಾರ್ಯ ಮಳಗಿ ಕುಟುಂಬದವರನ್ನು ಸನ್ಮಾನಿಸಿ ಆಶೀರ್ವದಿಸಿದರು.

ನಂತರ ಪ್ರವಚನ ನೀಡಿದ ಶ್ರೀಗಳು ಶ್ರೀಕೇಶವದೇವರ ನಿತ್ಯ ಸ್ಮರಣೆಯನ್ನು ಮಾಡಬೇಕು. ಭಗವಂತನ ಸ್ಮರಣೆಯಿಂದ ಸಕಾರಾತ್ಮಕತೆ ಉಂಟಾಗುತ್ತದೆ. ಪಾಪಗಳು ಪರಿಹಾರವಾಗುತ್ತದೆ ಎಂದು ಹೇಳಿದರು.

ವಿಪ್ರರು ನಿತ್ಯ ಸಂಧ್ಯಾವಂದನೆ ಮಾಡಬೇಕು. ಭಗವಂತರ ನಾಮಸ್ಮರಣೆಯಲ್ಲಿ ಸಕಲ ಶಕ್ತಿಯೂ ಅಡಗಿದೆ. ಅದರ ಮಹತ್ವ ತಿಳಿದುಕೊಳ್ಳುವ ನಿಟ್ಟಿನಲ್ಲಿ ಆಸಕ್ತರಾಗಬೇಕೆಂದು ಕರೆ ನೀಡಿದರು.

ಬಾಗಲಕೋಟೆಯಲ್ಲಿ ಎರಡು ದಿನಗಳ ಕಾಲ ವಿಜೃಂಭಣೆಯಿಂದ ಕಾರ್ಯಕ್ರಮ ಜರುಗಿದೆ ಎಂದರು. ನಂತರ ಶ್ರೀಗಳು ಶ್ರೀಮಠದ ಮುಂಭಾಗ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತ–ರಿಗೆ ಮುದ್ರಧಾರಣೆ ನೆರವೇ–ರಿಸಿದರು. ಚಿಕ್ಕಮಕ್ಕಳಿಂದ ಹಿಡಿದು ಹಿರಿಯರವರೆಗೆ ಮುದ್ರಧಾರಣೆ ಪಡೆದ ಭಕ್ತರು "ಹರಿಸರ್ವೋತ್ತಮ, ವಾಯು ಜೀವೋತ್ತಮ" ಘೋಷಣೆಗಳನ್ನು ಮೊಳಗಿಸಿದರು. ಮಧ್ಯಾಹ್ನ ತೀಥ–ಪ್ರಸಾದ ಸ್ವೀಕರಿಸಿದ ನಂತರ ಶ್ರೀಗಳು ಫಲಮಂತ್ರಾಕ್ಷತೆಯನ್ನು ನೀಡಿಭಕ್ತರನ್ನುಆಶೀರ್ವದಿಸಿದರು. ಸಂಜೆ ಕಾರ್ಯಕ್ರಮಗಳು ಸಂಪನ್ನಗೊಂಡವು.

ಶ್ರೀಮಠದ ದಿವಾನರಾದ ಪಂಡಿತ. ಶಶಿ ಆಚಾರ್ಯ, ಪಂಡಿತ. ಪಾಂಡುರಂಗಾಚಾರ್ಯ ರೊಟ್ಟಿ (ತಿರುಪತಿ), ಪಂಡಿತ. ಕೆ. ಹುಚ್ಚಾಚಾರ್ಯ, ಪಂಡಿತ. ರಘೋತ್ತಮಾಚಾರ್ಯ ನಾಗಸಂಪಿಗೆ, ಪಂಡಿತ. ಬಿಂದು ಮಾಧವಾಚಾರ್ಯನಾಗಸಂಪಿಗೆ, ಪಂಡಿತ. ವಿಜಯೇಂದ್ರಾಚಾರ್ಯ ಯತ್ನಟ್ಟಿ, ಪಂಡಿತ. ಆದಿಶೇಷಾಚಾರ್ಯ ಯಲಗೂರ ಹಾಗೂ ಇತರರು ಧಾರ್ಮಿಕ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದರು.

# ಕಾಂಗ್ರೆಸ್ ನಗರ ಘಟಕ ಅಧ್ಯಕ್ಷರಾಗಿ ಮಹಾಲಿಂಗ ಮಾಳಿ ನೇಮಕ



**ಮಹಾಲಿಂಗಪುರ :** ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಅವರ ಶಿಫಾರಸ್ಸಿನ ಮೇರೆಗೆ ಪಟ್ಟಣದ ನಿವಾಸಿ ಮಹಾಲಿಂಗಪ್ಪ ರಾಮಪ್ಪ ಮಾಳಿ ಅವರನ್ನು ಕಾಂಗ್ರೆಸ್ ಪಕ್ಷದ ಮಹಾಲಿಂಗಪುರ ನಗರ ಘಟಕದ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ತಕ್ಷಣವೇ ಜವಾಬ್ದಾರಿ ವಹಿಸಿಕೊಂಡು ಪಟ್ಟಣದಲ್ಲಿ ಪಕ್ಷದ ಸಂಘಟನೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದು ರಬಕವಿ–ಬನಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಪ್ಪ ಎಸ್. ಸಿಂಗಾಡಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಮಂಗಳೂರಿನಲ್ಲಿ ರಾಷ್ಟ್ರೀಯ ವೈದ್ಯರ ದಿನ & ವರ್ಗಾವಣೆಯಾದ ಅಧಿಕಾರಿಗಳ ಬಿಳ್ಕೊಡುಗೆ



**ಕುಕನೂರ್ :** ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಮಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಆಪ್ತಸಮಾಲೋಚಕ ಅಮರೇಶ ಅಂಗಡಿ ಸಾರ್ವಜನಿಕರ ಆರೋಗ್ಯ ಕಾಪಾಡಲು ಎಷ್ಟೋ ಬಾರಿ ನಮ್ಮ ವೈದ್ಯಾಧಿಕಾರಿಗಳು ಸಮಯಕ್ಕೆ ಸರಿಯಾಗಿ ಊಟ ಮಾಡದೆ, ಕುಟುಂಬಕ್ಕೆ ಸಮಯ ಕೊಡದೆ, ಕೌಂಟುಂಬಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳದೆ, ಸರಿಯಾಗಿ ನಿದ್ದೆ ಮಾಡದೆ ಸೇವೆ ಸಲ್ಲಿಸುತ್ತಿರುವದನ್ನ ನಾವು ಕಂಡಿದ್ದೇವೆ. ವೈದ್ಯರ ವೃತ್ತಿಯನ್ನು ನಾವು ಯಾವತ್ತೂ ಗೌರವಿಸಬೇಕು ಎಂದರು. ಡಾ ಸಿ.ಎಮ್. ಹಿರೇಮಠರವರು ಮಂಗಳೂರಿಗೆ ಬಂದಾಗಿನಿಂದ ಇಲ್ಲಿನ ಜನರಿಗೆ ಸಿಗುತ್ತಿರುವ ವೈದ್ಯಕೀಯ ಸೇವೆಯ ಕುರಿತು, ಡಾ ವಿ.ಜಿ.ಹಳ್ಳಳ್ಳಿ ಹಾಗೂ ಎರಡು ದಶಕಗಳ ಹಿಂದೆ ಜಿಲ್ಲೆಯ ಆರೋಗ್ಯ ಕಾಪಾಡಿದ ಡಾ. ಎನ್.ಎಸ್. ಗಾಯಕವಾಡ, ಡಾ. ಸಿ.ಬಿ. ಅಂಗಡಿ, ಡಾ. ಸಿಂಗಟಾಲೂರು, ಉಡುಪಿ ಡಾಕ್ಟರ್ ಖ್ಯಾತಿಯ ಡಾ. ಕೆ.ವಿ. ಆಚಾರ್, ಕೀಲು–ಮೂಳೆ ತಜ್ಞರು ಡಾ. ಕೆ.ಜಿ. ಕುಲಕರ್ಣಿ, ಚಿಕ್ಕಮಕ್ಕಳ ತಜ್ಞರಾದ ಡಾ. ಅಂದಾನಪ್ಪ ಬಳ್ಳೊಳ್ಳಿ, ಡಾ. ಎಲ್.ಬಿ. ಕಲಾಲ, ಹಲ್ಲಿನ ತಜ್ಞಡಾ. ಪುರಂದರೆ ಡಾ. ಟಿ.ಎಚ್. ಮುಲ್ಲಾ, ಡಾ. ಎಂ.ಬಿ. ರಾಂಪೂರ ರವರು ಸಲ್ಲಿಸುತಿದ್ದ ರೀತಿಯನ್ನು ನೆನೆದರು.

ಡಾ ಸಿ.ಎಮ್ ಹಿರೇಮಠರವರು ಮಾತನಾಡುತ್ತ ಇಂತಹ ಕಾರ್ಯಕ್ರಮಗಳು ನಮ್ಮಲ್ಲಿ ಸೇವೆ ಸಲ್ಲಿಸುವ ಹುಮ್ಮಸ್ಸು & ಜವಾಬ್ದಾರಿ ಹೆಚ್ಚಿಸುತ್ತವೆ ಎಂದ ಅವರು ಸಿಬ್ಬಂದಿಗಳ ಪ್ರೀತಿ ಗೌರವಕ್ಕೆ ಧನ್ಯವಾದ & ಮೆಚ್ಚುಗೆ ವ್ಯಕ್ತಪಡಿಸಿದರು.

ಇದೆ ಸಮಯದಲ್ಲಿ ಪ್ರಸೂತಿ & ಸ್ತ್ರೀರೋಗ ತಜ್ಞರಾದ ಡಾ ಸಿ.ಎಮ್. ಹಿರೇಮಠ & ಅರವಳಿಕೆ ತಜ್ಞರಾದ ಡಾ ವಿ.ಜಿ. ಹಳ್ಳಳ್ಳಿ ರವರಿಂದ ಕೇಕ್ ಕತ್ತರಿಸಿ ಅವರಿಗೆ ಗೌರವದ ನೆನಪಿನ ಕಾಣಿಕೆ ನೀಡಿಲಾಯಿತು.

2001 ರಿಂದ ಶುಶ್ರೂಷಕ ಅಧಿಕಾರಿಯಾಗಿ ಸೇವೆ ಸಲ್ಲಿ "ಮಂಗಳೂರು ಮಗಳು" ಎಂದೆ ಕರೆಸಿಕೊಳ್ಳುವ ಶ್ರೀಮತಿ ಗೌರಮ್ಮ ಕಾಕನಗರ, 2004 ರಿಂದ ಗ್ರಾಮದ ಮನೆ ಮನೆಗಳಿಗೆ ತೆರಳಿ ತಾಯಿ ಮತ್ತು ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಮಹತ್ತರ ಸೇವೆ ಸಲ್ಲಿಸಿರುವ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಶ್ರೀಮತಿ ಗೀತಾ ಅರಳಿಕಟ್ಟಿ, 2008 ರಿಂದ ನೇತ್ರಾಧಿಕಾರಿಯಾಗಿ "ಟೈಮ್ ಮಷಿನ್" ಎಂದೆ ಕರೆಸಿಕೊಳ್ಳುವ ಶ್ರೀ ಮಹಮದ್ ಯಾಶಿನ್ ಶೇಖ ರವರು ಹಾಗೂ 2018 ರಿಂದ ಆರೋಗ್ಯ ನೀರಿಕ್ಷಣಾ ಅಧಿಕಾರಿಯಾಗಿರುವ ಬೀದರ್ ಜಿಲ್ಲೆಯ ಎಲ್ಲರ ನೆಚ್ಚಿನ ಅರವಿಂದ ಮಾಳಗೆ ರವರು ಬೇರೆಡೆಗೆ ವರ್ಗಾವಣೆಯಾಗಿರುವ ಕಾರಣ ನೆನಪಿನ ಕಾಣಿಕೆ ನೀಡಿ ಬಿಳ್ಕೊಡಲಾಯಿತು ಹಾಗೂ ಸೇವಾ ನಿವೃತ್ತಿ ಹೊಂದಿದ ಉಮೇಶಗೌಡರಿಗೆ ಸನ್ಮಾನಿಸಲಾಯಿತು.

ಆರೋಗ್ಯ ಕೇಂದ್ರದ ರಮೇಶ, ಚನ್ನಬಸವರಾಜ, ವೀರಭದ್ರಪ್ಪ, ಲಲಿತಾ, ಕಮಲಾ, ಅಂಬಿಕಾ, ಶಿಲ್ಪಾ, ಅಂಬಿಕೆಬಡಿಗೇರ, ಪುಷ್ಪಾಂಜಲಿ, ಲಕ್ಷ್ಮಣ, ಬಸವರಾಜ, ರೇಣುಕಾ, ವೀರಮ್ಮ, ಸುಜಾತಾ, ಕುಸುಮಾ, ಸಣ್ಣ ಯಮನೂರಪ್ಪ, ರತ್ನಮ್ಮ, ಸುಮಿತ್ರಾ, ಆಶಾ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಹಾಗೂ ಮಂಗಳೂರು ಹೋಬಳಿಯ ಸುತ್ತಮುತ್ತಲಿನ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಜನಸ್ನೇಹಿ ಪೊಲೀಸ್ ಇಲಾಖೆ ಯನ್ನಾಗಿಸಿದ ಕೀರ್ತಿ ಜಿಲ್ಲಾ ಎಸ್ ಪಿ ಶ್ರೀಹರಿಬಾಬು ಇವರ ಬೀಳ್ಕೊಡುಗೆ ಸಮಾರಂಭ



**ಹೊಸಪೇಟೆ :** ಪೊಲೀಸ್ ವರಿಷ್ಠಾಧಿಕಾರಿ ಹರಿಬಾಬು ಬಿ.ಎಲ್. ಇಂದು ತಮ್ಮಅಧಿಕಾರವನ್ನು ಎಸ್. ಜಾಹ್ನವಿ ಅವರಿಗೆ ಅಧಿಕಾರ ಹಸ್ತಾಂತರಿ ಸಿದರು. ಜಿಲ್ಲೆಯ ಪೊಲೀಸ್ ಅಧೀಕ್ಷರಾದ ಶ್ರೀಹರಿ ಬಾಬು ಬಿ ಎಲ್ ಇವರು ಬೆಂಗಳೂರಿಗೆ ಅಪರಾಧ ವಿಭಾಗದ ಡಿ.ಸಿ.ಪಿ ಯಾಗಿ ವರ್ಗಗೊಂಡಿದ್ದರಿಂದ ಜಿಲ್ಲಾ ಪೊಲೀಸ್ ಇಲಾಖೆಯಿಂದ ಗೌರವ ನಮನಗಳೊಂದಿಗೆ ಎಸ್ಪಿ ಕಛೇರಿ ಆವರಣದಲ್ಲಿ ಇಂದು ಬೀಳ್ಕೊಡಲಾಯಿತು.

ಜಿಲ್ಲಾ ಎಸ್ ಪಿ ಶ್ರೀಹರಿಬಾಬು ಇವರಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಇವರು ಜಿಲ್ಲೆಯಲ್ಲಿ ಪೊಲೀಸರು ಜನರೊಂದಿಗೆ ಗೌರವಯುತವಾಗಿ ಜನಸ್ನೇಹಿಯಾಗಿ ವರ್ತಿಸಬೇಕೆಂದು ಆ ನಿಟ್ಟಿನಲ್ಲಿ ಜನಸ್ನೇಹಿ ಪೊಲೀಸ್ ಇಲಾಖೆ ಯನ್ನಾಗಿಸಿದ್ದು ಪ್ರಸಂಶನೀಯವಾಗಿದೆ. ಮತ್ತು ಇವರ ಸೇವಾ ಅವಧಿಯಲ್ಲಿ ಜಿಲ್ಲಾ ಪೊಲೀಸ್ ಪರೇಡ್ ಗ್ರೌಂಡ್ ನಿರ್ಮಾಣ ಮಾಡಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಶ್ರೀಹರಿಬಾಬು ರವರು ಅಧಿಕಾರ ಅವಧಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ ಜನ ಜೀವನದಲ್ಲಿ ಶಾಂತಿ ನೆಲೆಗೊಳಿಸುವಲ್ಲಿ ಬಹಳ ಶ್ರಮವಹಿಸಿ ದ್ದಾರೆ. ಇವರ ಸಾರ್ಥಕ ಶ್ರಮಕ್ಕೆ ಸಾರ್ವಜನಿಕ ರಿಂದ ಅಪಾರ ಮೆಚ್ಚುಗೆ ಗಳಿಸಿದ್ದಾರೆ.

ಇವರು ವಿಜಯನಗರ ದಿಂದ ಬೆಂಗಳೂರಿಗೆ ವರ್ಗಾವಣೆ ಆಗಿದೆ, ಎಂಬ ಸುದ್ದಿ ಜಿಲ್ಲೆಯಲ್ಲಿ ಹಬ್ಬುತ್ತಿದ್ದಂತೆ, ಅವರ ಕಚೇರಿಗೆ ನೂರಾರು ಅಮಾನಿಗಳ ದಂಡೇ ಹರಿದು ಬಂದು ಎಲ್ಲರೂ ಅಭಿನಂದನೆ ಸಲ್ಲಿಸಿದರು. ಅವರ ಇಲ್ಲಿನ ಸೇವಾ ಅವಧಿಯಲ್ಲಿ ಎಲ್ಲರೂಡನೆ ಇದ್ದ ಸೌಜನ್ಯತೆಯೇ ಇದೆಲ್ಲಕ್ಕೂ ಕಾರಣ ವಾಗಿದೆ ಎನ್ನಬಹುದು.

ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಎರೆಡು ವರ್ಷ ಸೇವೆ ಸಲ್ಲಿಸಿದ್ದು, ಇವರ ಸೇವಾ ಅವಧಿಯಲ್ಲಿ ಜಿಲ್ಲೆಯಾದ್ಯಂತ ಜನಮಣ್ಣನೆ ಗಳಿಸಿದ್ದರು.

ಈ ಸಂಧರ್ಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ಜನಪ್ರತಿನಿದಿಗಳು ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಇದ್ದರು.

# ಶಕ್ತಿ ಯೋಜನೆಯ 500 ಕೋಟಿ ಪ್ರಯಾಣ: ಅಥಣಿಯಲ್ಲಿ 'ನಾರಿ ಶಕ್ತಿ' ಸಂಭ್ರಮ, ಶಾಸಕ ಲಕ್ಷ್ಮಣ ಸವದಿ ಅವರಿಂದ ಸಿಹಿ ವಿತರಣೆ



**ಅಥಣಿ :** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರ ಸಂಚಾರವು ದಾಖಲೆಯ 500 ಕೋಟಿ ಪ್ರಯಾಣಗಳ ಗಡಿ ದಾಟಿದ ಹಿನ್ನೆಲೆಯಲ್ಲಿ, ಅಥಣಿ ತಾಲೂಕಿನ ಬಸ್ ನಿಲ್ದಾಣದ ಆವರಣದಲ್ಲಿ ಇಂದು 'ನಾರಿಶಕ್ತಿಸಂಭ್ರಮಾಚರಣೆ' ಕಾರ್ಯಕ್ರಮವನ್ನು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರ ನೇತೃತ್ವದಲ್ಲಿ ಸಿಹಿ ಹಂಚುವ ಮೂಲಕ ಅದ್ದೂರಿಯಾಗಿ ಆಚರಿಸಲಾಯಿತು. ಈ ಐತಿಹಾಸಿಕ ಸಾಧನೆಯನ್ನು ಆಚರಿಸುವ ಸಲುವಾಗಿ ಅಥಣಿಯಲ್ಲಿ ಏರ್ಪಡಿಸಿದ್ದ ಈ ಸಂಭ್ರಮಾಚರಣೆಯಲ್ಲಿ ಶಾಸಕ ಲಕ್ಷ್ಮಣ ಸವದಿ ಅವರು ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ಶಕ್ತಿ ಯೋಜನೆಯು ರಾಜ್ಯದಾದ್ಯಂತ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶಕಲ್ಪಿಸಿದ್ದು, ಕೇವಲಎರಡು ವರ್ಷಗಳಲ್ಲಿ 500 ಕೋಟಿಗೂ ಹೆಚ್ಚು ಪ್ರಯಾಣಗಳನ್ನು ಪೂರೈಸಿರುವುದು ಯೋಜನೆಯ ಅಪಾರ ಯಶಸ್ಸಿಗೆ ಸಾಕ್ಷಿಯಾಗಿದೆ.

"ಶಕ್ತಿ ಯೋಜನೆ ಕೇವಲ ಉಚಿತ ಪ್ರಯಾಣ ಯೋಜನೆಯಲ್ಲ, ಇದು ಮಹಿಳಾ ಸಬಲೀಕರಣದ ಮಹತ್ವದ ಹೆಜ್ಜೆ. ಆರ್ಥಿಕವಾಗಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವುದರ ಜೊತೆಗೆ, ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಅವರು ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಲು ಈ ಯೋಜನೆ ನೆರವಾಗಿದೆ. 500 ಕೋಟಿ ಪ್ರಯಾಣಗಳ ಗಡಿ ದಾಟಿರುವುದು ಈ ಯೋಜನೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರು ಶಕ್ತಿ ಯೋಜನೆಯ ಯಶಸ್ಸಿಗೆ ಕಾರಣರಾದ ಸಾರಿಗೆ ಇಲಾಖೆಯ ಸಿಬ್ಬಂದಿ ಹಾಗೂ ಮಹಿಳಾ ಪ್ರಯಾಣಿಕರನ್ನು ಅಭಿನಂದಿಸಿದರು. ಅಲ್ಲದೆ, ಮಹಿಳಾ ಪ್ರಯಾಣಿಕರೊಂದಿಗೆ ಸಂವಾದ ನಡೆಸಿ, ಶಕ್ತಿ ಯೋಜನೆ ಕುರಿತು ಅವರ ಮುಕ್ತ ಅಭಿಪ್ರಾಯಗಳನ್ನು ಆಲಿಸಿದರು.

ನಂತರ ಮಾತನಾಡಿದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಸಿದ್ಧಾರ್ಥ ಶಿಂಗೆ ಯೋಜನೆಯ ಯಶಸ್ಸಿನ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಶಕ್ತಿ ಯೋಜನೆ ಸಂಭ್ರಮಾಚರಣೆಯಲ್ಲಿ ಸ್ಥಳೀಯ ಸಾರಿಗೆ ಅಧಿಕಾರಿಗಳು, ಸಿಬ್ಬಂದಿ, ಜನ ಪ್ರತಿನಿಧಿಗಳು, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸರ್ವ ಸದಸ್ಯರು ಹಾಗೂ ನೂರಾರು ಮಹಿಳಾ ಪ್ರಯಾಣಿಕರು ಪಾಲ್ಗೊಂಡಿದ್ದರು.

# ಮೂಲಭೂತ ಸೌಕರ್ಯಗಳಿಗಾಗಿ ಎಪಿಎಂಸಿ ಮಾರುಕಟ್ಟೆಯಲ್ಲಿ ಬಿ.ಎನ್.ಎಚ್.ಎಸ್ ವತಿಯಿಂದ ಸಹಿ ಸಂಗ್ರಹ

**ಬಳ್ಳಾರಿ :** ಬಳ್ಳಾರಿ ನಾಗರಿಕ ಹೋರಾಟ ಸಮಿತಿ(ಃಓಊಖ)ಯಿಂದ, ನಾಗರಿಕರಿಗೆ ಮೂಲ ಸೌಕರ್ಯ ಒದಗಿಸಬೇಕೆಂದು ಆಗ್ರಹಿಸಿ, ಇದೇ ತಿಂಗಳು 27ರಂದು ನಡೆಯುತ್ತಿರುವ ಜನತೆಯ ಸಮಾವೇಶದ ಹಿನ್ನೆಲೆಯಲ್ಲಿ, ಒಂದು ಲಕ್ಷ ಸಹಿ ಸಂಗ್ರಹ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದಕ್ಕೆ ಪೂರಕವಾಗಿ ಇಂದು ಎಪಿಎಂಸಿ(ಂಕಒಅ) ಮಾರುಕಟ್ಟೆಯಲ್ಲಿ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗಿತ್ತು ಎಂದು ನಾಗರಿಕ ಹೋರಾಟ ಸಮಿತಿಯ ಸೋಮಶೇಖರ್ ಗೌಡ ತಿಳಿಸಿದರು. ಅವರು ಇಂದು ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಮತ್ತುವರ್ತಕರಿಂದ ಸಹಿಸಂಗ್ರಹವನ್ನು ಅಭಿಯಾನದಲ್ಲಿ ಭಾಗವಹಿಸಿ ಮಾತನಾಡಿ. ಬಳ್ಳಾರಿ ನಗರದ ಸಾರ್ವಜನಿಕರು ಕಳೆದ ಹಲವು ತಿಂಗಳುಗಳಿಂದ ರಸ್ತೆ ಕುಡಿಯುವ ನೀರು ಚರಂಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅದೇ ರೀತಿಯಾಗಿ ನಗರದಲ್ಲಿ ಬೀಡಾಡಿದನಗಳು ಮತ್ತು ಬೀದಿನಾಯಿಗಳ ಹಾವಳಿ ಸಹಾಯ ಹೆಚ್ಚಾಗಿದೆ ಇವುಗಳನ್ನು ಕೂಡಲೇ ನಿರ್ಮೂಲನೆ ಮಾಡಬೇಕೆಂದರು. ಎಪಿಎಂಸಿ ಮಾರುಕಟ್ಟೆಯಲ್ಲಿನ ವ್ಯಾಪಾರಿಗಳು ಮಾರುಕಟ್ಟೆ ಮೂಲಭೂತ ಸೌಕರ್ಯಗಳ ಅವ್ಯವಸ್ಥೆ ಪ್ರಾಂಗಣದಲ್ಲಿ ಶುಚಿತ್ವದ ಬಗ್ಗೆ, ಕುಡಿಯುವ ನೀರಿನಲ್ಲಿ ಚರಂಡಿ ನೀರು ಮಿಶ್ರವಾಗಿ ಸರಬರಾಜಾಗುತ್ತಿರುವ ಸಮಸ್ಯೆಗಳನ್ನು ಅಲ್ಲಿನ ವ್ಯಾಪಾರಿಗಳು ಸಹಿ ಸಂಗ್ರಹಣ ಸಂದರ್ಭದಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಇದರ ಬಗ್ಗೆ ನಗರ ಪಾಲಿಕೆಯ ನಿರ್ಲಕ್ಷ ಧೋರಣೆಯನ್ನು ಈ ಸಂದರ್ಭದಲ್ಲಿ ಸೋಮಶೇಖರ್ ಗೌಡ ಖಂಡಿಸಿದರು. ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನಾವು ನಿಮಗೆ ಬೆಂಬಲಿಸುತ್ತೇವೆ ಎಂದು ಸಾರ್ವಜನಿಕರು ಪ್ರತಿಕ್ರಿಯೆ ನೀಡಿದರು. ಸಹಿ ಸಂಗ್ರಹ ಕಾರ್ಯಕ್ರಮದಲ್ಲಿ ನಾಗರಿಕ ಹೋರಾಟ ಸಮಿತಿಯ ಸದಸ್ಯರಾದ ಗೋವಿಂದ್, ಗುರಳ್ಳಿರಾಜ, ಲಿಂಗರಾಜು ಮುಂತಾದವರು ಭಾಗವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State